- ಕಲಬುರಗಿ
- ಬೀದರ್
- ಯಾದಗಿರಿ
- ರಾಯಚೂರ

ಜಿಲ್ಲೆಗಳಲ್ಲಿ ಒಂದೇ ಅವೃತ್ತಿಯಲ್ಲಿ ಪ್ರಕಟ

# ಜನತಾ ಟೈಮ್ಸ್

ಪ್ರಾದೇಶಿಕ ಕನ್ನಡ ದಿನ ಪತ್ರಿಕೆ

JANATA TIMES REGIONAL KANNADA DAILY, KALABURAGI


28 ವರ್ಷಗಳಿಂದ ನಿಮ್ಮ ಸೇವೆಯಲ್ಲಿ

Editor: **Sharanabasappa. K.H** ( sharanu Jidaga) Mobile: 9972688456, 7676749090 ☎: 08472-453417 Email:sharanu.jidaga@gmail.com janatatimeskannadadaily@gmail.com Sub Editor: **Sumangala S.H**

Volume ಸಂಪುಟ 28 | Issue ಸಂಚಿಕೆ 6 | Date ದಿನಾಂಕ: 11-03-2026 | Wednesday ಬುಧವಾರ | RNI No. 68739/96 L/RNP Dlgs/29/KLB Dn/2025-2027 | PAGES ಪುಟಗಳು 06 | PRICE ಬೆಲೆ 01 ₹


## ಬೀದಿ ನಾಯಿಗಳ ನಿಯಂತ್ರಣಕ್ಕೆ ಶಿಕ್ಷಕರನ್ನು ನೇಮಿಸಲು ಹೊರಟ ಸರ್ಕಾರ: ಹೊರಟ್ಟಿ ಆಕ್ರೋಶ





ಬೆಂಗಳೂರು, ಮಾರ್ಚ್ 10: ಬೀದಿ ನಾಯಿಗಳ ನಿಯಂತ್ರಣಕ್ಕೆ ಶಿಕ್ಷಕರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲು ಮುಂದಾಗಿರುವ ಸರ್ಕಾರದ ನಿರ್ಧಾರದ ಬಗ್ಗೆ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮತದಾನ, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆಗೆ ಈಗಾಗಲೇ ಶಿಕ್ಷಕರು ತೊಡಗಿಸಿಕೊಂಡಿದ್ದಾರೆ. ಮಕ್ಕಳಿಗೆ ಹಾಲು–ಮೊಟ್ಟೆ ವಿತರಣೆಯಂತಹ ಬೋಧಕೇತರ ಕೆಲಸಗಳಲ್ಲಿಯೂ ನಿರತರಾಗಿದ್ದಾರೆ. ರಾಜ್ಯಾದ್ಯಂತ ಈಗಾಗಲೇ ಶಿಕ್ಷಕರ ಕೊರತೆ ಇದ್ದು, ಇಂತಹ ಸಂದರ್ಭದಲ್ಲಿ ನಾಯಿ ಕಾಯುವ ಜವಾಬ್ದಾರಿ ನೀಡುವುದು ಹಾಸ್ಯಾಸ್ಪದ. ಶಿಕ್ಷಕ ಸಮುದಾಯಕ್ಕೆ ಮಾಡುವ ಅವಮಾನ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಮುಖೇನ ತಿಳಿಸಿದ್ದಾರೆ.

ಹೊರಟ್ಟಿ ಬರೆದ ಪತ್ರದಲ್ಲೇನಿದೆ?

ರಾಜ್ಯದ ಎಲ್ಲಾ ಶಿಕ್ಷಕರು ಮತದಾನದ ಕೆಲಸಗಳು, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆ, ಮಕ್ಕಳಿಗೆ ಹಾಲು, ಮೊಟ್ಟೆ ವಿತರಣೆ ಇನ್ನೂ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಇದೀಗ ಅವುಗಳ ಜೊತೆಗೆ ಸರ್ಕಾರವು ಬೀದಿ ನಾಯಿಗಳನ್ನು ಕಾಯುವ ಹೊಣೆಗಾರಿಕೆಯನ್ನು ಶಿಕ್ಷಕರಿಗೆ ನೀಡಿರುವ ಕುರಿತು ದಿನಪತ್ರಿಕೆಯಲ್ಲಿ ವರದಿಯಾಗಿದ್ದು, ಸರ್ಕಾರದ ಈ ಕ್ರಮ ನಿಜಕ್ಕೂ ಬಹಳ ಬೇಸರದ ಸಂಗತಿಯಾಗಿದೆ. ಬೀದಿ ನಾಯಿಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಮುಂದಾಗಿರುವ ಸರ್ಕಾರವು, ಶಾಲಾ ಶಿಕ್ಷಕರನ್ನ ನೋಡೆಲ್ ಅಧಿಕಾರಿಗಳನ್ನಾಗಿ ನೇಮಕ ಮಾಡುವಂತೆ ಸೂಚಿಸಿದೆ. ಇದು ಸರ್ಕಾರವು ಶಿಕ್ಷಕರನ್ನು ನಾಯಿಗಳಿಗಿಂತ ಕಡೆಯದಾಗಿ ನೋಡುತ್ತಿದೆ ಎನ್ನುವ ಅರ್ಥದಲ್ಲಿ ಬಿಂಬಿತವಾಗುತ್ತದೆ.

ಈಗಾಗಲೇ ಶಿಕ್ಷಕರು ಹಲವು ಕೆಲಸಗಳನ್ನು ನಿರ್ವಹಿಸುತ್ತಿರುವ ಕಾರಣ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹೆಚ್ಚು ಗಮನ ಹರಿಸಲು ಆಗುತ್ತಿಲ್ಲ. ಇದರಿಂದ ಮಕ್ಕಳ ಕಲಿಕೆಯ ಗುಣಮಟ್ಟ ಕಡಿಮೆಯಾಗಿ ಫಲಿತಾಂಶವು ಸಹ ಕಡಿಮೆಯಾಗುತ್ತದೆ. ಪ್ರಸ್ತುತ ರಾಜ್ಯಾದ್ಯಂತ ಶಿಕ್ಷಕರ ಕೊರತೆ ಕಾಣುತ್ತಿದೆ. ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರವು ಜನಗಣತಿ ಆರಂಭಿಸುತ್ತಿದ್ದು ಅದರಲ್ಲೂ ಈ ಶಿಕ್ಷಕರೇ ಪಾಲ್ಗೊಳ್ಳಬೇಕಿದೆ. ಶಿಕ್ಷಕರ ಕೊರತೆಯ ನಡುವೆಯೇ ಸರ್ಕಾರದ ಎಲ್ಲಾ ಕಾರ್ಯಕ್ರಮಗಳಿಗೂ ಅವರನ್ನು ನಿಯೋಜಿಸುವುದರ ಜೊತೆಗೆ ಈಗ ಬೀದಿ ನಾಯಿಗಳ ನಿಯಂತ್ರಣ ಹೊಣೆ ಅವರಿಗೆ ನೀಡಲು ಹೊರಟ ಕ್ರಮ ನಿಜಕ್ಕೂ ಹಾಸ್ಯಾಸ್ಪದ. ಹೀಗಾಗಿ ಈ ನಿರ್ಧಾರವನ್ನು ಸರ್ಕಾರ ಕೂಡಲೇ ಕೈಬಿಡಬೇಕು ಎಂದು ಹೊರಟ್ಟಿ ಆಗ್ರಹಿಸಿದ್ದಾರೆ

## ಬೋಳಣಿಯಲ್ಲಿ ಇಂದಿನಿಂದ 6 ದಿನಗಳವರೆಗೆ ಕೊಪ್ಪಳ ಗವಿಸಿದ್ದೇಶ್ವರ ಮಹಾಸ್ವಾಮೀಜಿ ಪ್ರವಚನದ ಸುಗ್ಗಿ

ಕಲಬುರ್ಗಿ, ಮಾ.10– ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಸಂಸ್ಥಾನ ಶ್ರೀ ಗವಿಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳಿಂದ ಮಾರ್ಚ್ 12ರಿಂದ 17ರವರೆಗೆ ಆರು ದಿನಗಳ ಕಾಲ ಆಳಂದ್ ತಾಲ್ಲೂಕಿನ ಬಾಳಿ (ಬೋಳಣಿ) ಗ್ರಾಮದಲ್ಲಿ ಪ್ರತಿದಿನ ಸಂಜೆ 6:30ರಿಂದ 7:30ರವರೆಗೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ರಥೋತ್ಸವ ಮೈದಾನದಲ್ಲಿ ಆಧ್ಯಾತ್ಮ ಪ್ರವಚನ ಜರುಗಲಿದೆ ಎಂದು ಗ್ರಾಮದ ಶ್ರೀ ಮಲ್ಲಿಕಾರ್ಜುನ್ ದೇವಸ್ಥಾನದ ಕಮಿಟಿ ಹಾಗೂ ಜಾತ್ರಾ ಸಮಿತಿ ಸಂಚಾಲಕ ಪ್ರಭುಲಿಂಗ ಮೂಲಗೆ ಅವರು ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 11ರಂದು ಗುರುವಾರ ಸಂಜೆ 6.30 ಗಂಟೆಗೆ ನಾಡಿನ ಹರ ಗುರು ಚರ ಮೂರ್ತಿಗಳ ಸಾನಿಧ್ಯದಲ್ಲಿ ಆಧ್ಯಾತ್ಮ ಪ್ರವಚನ ಕಾರ್ಯಕ್ರಮದ ಉದ್ಘಾಟನೆ ಜರುಗಲಿದೆ. 13ರಿಂದ ಬೆಳಿಗ್ಗೆ 6 ಗಂಟೆಯಿಂದ ಚಿಕೇನಕೊಪ್ಪದ ಶಿವಶಾಂತವೀರ ಶರಣರು ಹಾಗು ಪೂಜ್ಯರುಗಳೊಂದಿಗೆ ಸದ್ಭಾವನಾ ಪಾದಯಾತ್ರೆ ಬಾಳಿ (ಬೋಳಣಿ) ಗ್ರಾಮದಲ್ಲಿ ನೆರವೇರಲಿದೆ ಎಂದರು.

ಮಾರ್ಚ್ 14ರಂದು ನರೋಣಾ ಗ್ರಾಮದಲ್ಲಿ, 15 ರಂದು ಕೊಡಲಹಂಗರಗಾದಲ್ಲಿ, 16ರಂದು ಕಡಗಂಚಿಯಲ್ಲಿ 17ರಂದು ಹಳ್ಳಿಸಲಗರ್ ಗ್ರಾಮದಲ್ಲಿ ಪಾದಯಾತ್ರೆ ನಡೆಯಲಿದೆ. ಪ್ರವಚನಕ್ಕೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಬಾಳಿ ಗ್ರಾಮಕ್ಕೆ ಸಂಪರ್ಕಿಸುವ ಎಲ್ಲ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಹಾಗೂ ಮೋಟಾರು ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ನಾಡಿನ ಎಲ್ಲ ಭಕ್ತರು ಈ ಆಧ್ಯಾತ್ಮ ಪ್ರವಚನ ಕೇಳಿ ಪುನೀತರಾಗಬೇಕು ಎಂದು ಅವರು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಶಿವಯೋಗೆಪ್ಪ ಬಿರಾದಾರ್, ಶಂಕರ್ ಪಿರಿಟ್, ವಿಜಯಕುಮಾರ್ ಪಡಸಲಗಿ, ಶಂಕರ್ ಉಜಳಂಬೆ, ಶಿವಾನಂದ್ ಜಮಾದಾರ್ ಮುಂತಾದವರು ಉಪಸ್ಥಿತರಿದ್ದರು.

## ಕುರ್ಚಿ ಕಾದಾಟದ ನಡುವೆಯೂ ಡಿಕೆಶಿ ಗುಣಗಾನ ಮಾಡಿದ ಸಿದ್ದರಾಮಯ್ಯ



ಬೆಂಗಳೂರು, ಮಾರ್ಚ್ 10: ಕರ್ನಾಟಕದ ಸಿಎಂ ಕುರ್ಚಿ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಡುವಿನ ತಿಕ್ಕಾಟ ಎಲ್ಲರಿಗೂ ಗೊತ್ತಿರುವ ವಿಷಯ. ಹೀಗಿದ್ದರೂ ಉಭಯ ನಾಯಕರು ಇಲ್ಲಿಯವರೆಗೂ ಎಲ್ಲಿಯೂ ಒಬ್ಬರ ವಿರುದ್ಧ ಮತ್ತೊಬ್ಬರು ಬಹಿರಂಗ ಸಮರ ಸಾರಿಲ್ಲ. ಮೊನ್ನೆ ಮೊನ್ನೆಯಷ್ಟೇ ನಮ್ಮಿಬ್ಬರದ್ದು ಹಾಲು–ಜೇನಿನ ಸಂಬಂಧ ಎಂದು ಸಿದ್ದರಾಮಯ್ಯ ಹೇಳಿದ್ದಿದ್ದು ಹಲವರ ಹುಬ್ಬೇರಿಸಿತ್ತು. ಈ ನಡುವೆ ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ 6 ವರ್ಷ ಪೂರ್ಣಗೊಳಿಸಿದ ಹಿನ್ನೆಲೆ ಎಕ್ಸ್ ಖಾತೆಯ ಮೂಲಕ ಮುಖ್ಯಮಂತ್ರಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಅಷ್ಟೇ ಅಲ್ಲದೆ ಅಕ್ಷರಶಃ ಕೆಪಿಸಿಸಿ ಅಧ್ಯಕ್ಷರ ಗುಣಗಾನ ಮಾಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವ ನಾಯಕರಿಗೆ ಮಾದರಿ. ವಿಪಕ್ಷ ಬಿಜೆಪಿ ಸುಳ್ಳು ಕೇಸ್‌ಗಳನ್ನು ಹಾಕಿ ಬಗೆಬಗೆಯ ಕಿರುಕುಳ ನೀಡಿದರೂ ಡಿ.ಕೆ.ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ.

ಇದು ಕಾಂಗ್ರೆಸ್‌ನ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆಯೂ ಹೌದು. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರುವುದಕ್ಕೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜೊತೆ ಡಿಕೆಶಿಯವರು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ ಎಂದು ಸಿದ್ದರಾಮಯ್ಯ ಹಾಡಿ ಹೊಗಳಿದ್ದಾರೆ.

ನನಗಿಂತ ಕಿರಿಯರಾದ ಡಿ.ಕೆ. ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮ ಬಯಕೆ. ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡ ಜೊತೆಯಿರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಸಿಎಂ ಕುರ್ಚಿ ವಿಚಾರದಲ್ಲಿ ಇಬ್ಬರ ನಡುವೆ ಅದೆಷ್ಟೇ ತಿಕ್ಕಾಟಗಳು ನಡೆದು, ವಿಷಯ ಹೈಕಮಾಂಡ್ ಅಂಗಳ ತಲುಪಿದ್ದರೂ ಉಭಯ ನಾಯಕರ ನಡೆ ಮಾತ್ರ ಭಾರೀ ಕುತೂಹಲ ಮೂಡಿಸಿದೆ.

## ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿವೇಶನ ಹಂಚಿಕೆಯಲ್ಲಿ 12000 ಸದಸ್ಯರಿಗೆ ವಂಚನೆ: ಮಳ್ಳಿ ಆರೋಪ

ಕಲಬುರ್ಗಿ, ಮಾ.10– ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ನೌಕರ



ಸದಸ್ಯರಿಗೆ ಅತ್ಯಂತ ಕಡಿಮೆ ದರದಲ್ಲಿ ನಿವೇಶನಗಳನ್ನು ನಿಗದಿಪಡಿಸಿ ಪ್ರಾಮಾಣಿಕವಾಗಿ ನಿವೇಶನಗಳನ್ನು ಹಂಚಿಕೆ ಮಾಡಿತ್ತಾರೆಂದು ನಂಬಿ ಸುಮಾರು 12000 ಸದಸ್ಯರು ವಂಚನೆಗೆ ಒಳಗಾಗಿದ್ದೇವೆ ಎಂದು ಶಾಂತಪ್ಪ ಮಳ್ಳಿ ಅವರು ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ವೆ ನಂಬರ 176/2ರ ಭೂ ಮಾಲೀಕ ಚನ್ನಮಲ್ಲಪ್ಪ ನಾಗಪ್ಪ ಅವರಿಂದ ಸಂಘವು ಕೃಷಿಯೇತರ ಜಮೀನು ವಸತಿ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಿ ನೌಕರರ ಗೃಹ ಮಂಡಳಿ ಸಹಕಾರ ಸಂಘದವರು ಖರೀದಿ ಮಾಡಿದ್ದು, ಸದರಿ ಜಮೀನು ಜೆಡಿಎ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಅವರ ಅಭಿಪ್ರಾಯ ಪಡೆಯಬೇಕಾಗಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ ಎಂದರು.

ಖರೀದಿ ಮಾಡಿದ ಜಮೀನಿನಲ್ಲಿ ಸಂಘದವರು ವಿನ್ಯಾಸ ನಕ್ಷೆ ತಯ್ಯಾರಿಸಿ ನಿಯಮಾನುಸಾರ ಉದ್ಯಾನವನಕ್ಕೆ ಜಾಗ ಕಾಯ್ದಿರಿಸಿ ಅದರಲ್ಲಿ ಒಟ್ಟು 281 ನಿವೇಶನಗಳನ್ನು ಮಾಡಿ 1991ರ ಫೆಬ್ರವರಿ 27ರಂದು ಅನುಮೋದನೆ ಪಡೆದು ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ. ಖರೀದಿ ಮಾಡಿದ ನಿವೇಶನಗಳನ್ನು ಉಪ ನೊಂದಣಿ ಕಚೇರಿಯಲ್ಲಿ ನಮ್ಮ ಹೆಸರಿಗೆ ನೊಂದಣಿ ಮಾಡಿಕೊಂಡು ಗ್ರಾಮ ಪಂಚಾಯಿತಿಯಲ್ಲಿ ನಮ್ಮ ಹೆಸರಿಗೆ ಮಾರ್ಪಾಡು (ಮ್ಯೂಟೇಶನ್) ಮಾಡಿಕೊಂಡು 2019–20ರವರೆಗೆ ಖಾಲಿ ನಿವೇಶನದ ತೆರಿಗೆ ಕಟ್ಟಿದ್ದೇವೆ ಎಂದು ಅವರು ಹೇಳಿದರು.

ನಗರಾಭಿವೃದ್ಧಿ ಪ್ರಾಧಿಕಾರ ಕಚೇ–ರಿಯ ತಮ್ಮ ಪತ್ರದಲ್ಲಿ ವಿನ್ಯಾಸದ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಮಂಡಲ ಪಂಚಾಯಿತಿಯಿಂದ ಅನುಮೋದನೆ ಪಡೆದಿದ್ದು, ಕಾಯ್ದಿರಿಸಿದ ಉದ್ಯಾನವನ ಜಾಗದಲ್ಲಿ ಹೆಚ್ಚುವರಿ ನಿವೇಶನಗಳನ್ನು ಅಳವಡಿಸಿದ್ದು ಕಾನೂನು ಬಾಹಿರ ಕ್ರಮವಾಗಿದೆ. ವಿನ್ಯಾಸದ ನಕ್ಷೆ ಮತ್ತು ನಿವೇಶನಗಳ ಖಾತೆಗಳನ್ನು ರದ್ದುಪಡಿಸುವಂತೆ ಕುಸನೂರಿನ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದ್ದಾರೆ. ಸದರಿ ಆದೇಶದಿಂದ ಗ್ರಾಮ ಪಂಚಾಯಿತಿ ಸಿಬ್ಬಂದಿಯವರು ತೆರಿಗೆಯನ್ನು ತೆಗೆದುಕೊಳ್ಳುವುದು ನಿಲ್ಲಿಸಿಬಿಟ್ಟರು ಈ ವಿಷಯವನ್ನು 2022ರಿಂದ ಇಲ್ಲಿಯವರೆಗೆ ಸಂಘದ ಅಧ್ಯಕ್ಷರ ಗಮನಕ್ಕೆ ತರಲಾಗಿ ಇದರ ಬಗ್ಗೆ ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ದೂರಿದರು. ಗ್ರಾಮ ಪಂಚಾಯಿತಿಯವರಿಗೆ ಪತ್ರದ ಮೂಲಕ ನಿವೇದನೆ ಮಾಡಿಕೊಂಡಾಗ ಸರ್ವೆ ನಂಬರ 176/2 ರ ವಿನ್ಯಾಸ ನಕ್ಷೆ ಮತ್ತು ನಿವೇಶನ ಖಾತೆಗಳನ್ನು 2020ರಲ್ಲಿಯೇ ರದ್ದುಪಡಿಸಲಾಗಿದೆ ಎಂದು ಕಳೆದ 2026ರ ಫೆಬ್ರವರಿ 24ರಂದು ಹಿಂಬರಹ ಕೊಟ್ಟಿದ್ದಾರೆ. ಮೊದಲಿನ ವಿನ್ಯಾಸದ ನಕ್ಷೆಯಲ್ಲಿ 281 ನಿವೇಶನಗಳು ಕಾಯ್ದಿರಿಸಿದ ಉದ್ಯಾನವನದಲ್ಲಿ ಹೆಚ್ಚುವರಿ ನಿವೇಶನಗಳು ಅಳವಡಿಸಿ 2ನೇ ವಿನ್ಯಾಸ ನಕ್ಷೆಯಲ್ಲಿ 24 ಹೀಗೆ ಒಟ್ಟು 305 ನಿವೇಶನಗಳನ್ನು ಖರೀದಿ ಮಾಡಿದ ನೌಕರ ಸದಸ್ಯರು ಆತಂತ್ರ ಸ್ಥಿತಿಯಲ್ಲಿದ್ದೇವೆ ಎಂದು ಅವರು ತೀವ್ರ ಕಳವಳ ವ್ಯಕ್ತಪಡಿಸಿದರು.

ಬಹಳ ವರ್ಷಗಳಿಂದ ಸದರಿ ಸರ್ವೆನಂಬರ ನಂ: 5–6 ಸದಸ್ಯರು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಸಂಘದಿಂದ ಆಗಿರುವ ತಪ್ಪನ್ನು ತಿದ್ದಿಕೊಂಡು ನಿಯಮಾನುಸಾರ ಇರುವ ವಿನ್ಯಾಸ ನಕ್ಷೆಯಂತೆ ಸರಿಪಡಿಸಿ ಸದಸ್ಯರಿಗೆ ನ್ಯಾಯ ಸಿಗಬೇಕೆಂದು ಸಂಘದ ಅಧ್ಯಕ್ಷರಿಗೆ ಕೇಳಿಕೊಂಡರೆ, ಅದ–ಕ್ಕೆ ಅಧ್ಯಕ್ಷರು ನ್ಯಾಯಾಲಯಕ್ಕೆ ಹೋಗಲು ಹೇಳುತ್ತಾರೆ. ತಪ್ಪು ಮಾಡುವುದು ಸಂಘದವರು ನ್ಯಾಯಾಲಯಕ್ಕೆ ನಾವು ಏಕೆ ಹೋಗಬೇಕೆ? ಇದು ಅನ್ಯಾಯ ಎಂದು ಅವರು ಆಕ್ರೋಶ ಹೊರಹಾಕಿದರು.

ಅನ್ಯಾಯದ ವಿರುದ್ಧ ಸಂಘಟಿ–ತ ಹೋರಾಟ ಮಾಡಲು ನಿರ್ಧರಿಸಿದ್ದೇವೆ. ಅದಕ್ಕಾಗಿ ವಂಚನೆಗೆ ಒಳಗಾದವರು ಮೊಬೈಲ್ ನಂಬರ್ 7795862139, ಮತ್ತು 9481801625ಗೆ ಸಂಪರ್ಕಿಸಲು ಅವರು ಕೋರಿದರು. ಸುದ್ದಿಗೋಷ್ಠಿಯಲ್ಲಿ ಮಲ್ಲಣ್ಣ ಮಡಿವಾಳ್, ಸುಭಾಷ್, ಉದ್ದಂಡಯ್ಯ, ದೇವಿದಾಸ್, ದೇವೇಂದ್ರ, ಗಂಗಾಧರ್, ಗುರಪ್ಪ ಹೊಸಳ್ಳಿ ಮುಂತಾದವರು ಉಪಸ್ಥಿತರಿದ್ದರು.

## ವಿಧಾನ ಪರಿಷತ್ ಸೇರಿದಂತೆ ಎಲ್ಲ ಚುನಾವಣೆಗಳಲ್ಲಿ ವಂಚಿತ ಬಹುಜನ ಆಘಾಡಿ ಪಕ್ಷದ ಸ್ಪರ್ಧೆ

ಕಲಬುರ್ಗಿ, ಮಾ.10– ರಾಜ್ಯ ವಿಧಾನ ಪರಿಷತ್ ಸೇರಿದಂತೆ ರಾಜ್ಯದ ಎಲ್ಲ ಚುನಾವಣೆಗಳಲ್ಲಿ ವಂಚಿತ ಬಹುಜನ ಆಘಾಡಿ ರಾಷ್ಟ್ರೀಯ ಪಕ್ಷ ಸ್ಪರ್ಧಿಸಲಿದೆ ಎಂದು ಪಕ್ಷದ ಮುಖಂಡ ಡಾ. ಸುಶೀಮ್ ಸಕ್ಪಾಲ್ ಅವರು ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಪ್ರಕಾಶ್ ಅಂಬೇಡ್ಕರ್ ಅವರ ಆದೇಶದ ಮೇರೆಗೆ ಕರ್ನಾಟಕದಲ್ಲಿ ಎಲ್ಲ ಚುನಾವಣೆಗಳಲ್ಲಿ ಪಕ್ಷವು ಸ್ಪರ್ಧಿಸಲಿದೆ. ಈಶಾನ್ಯ ಪದವೀಧರ ಕ್ಷೇತ್ರವೂ ಸೇರಿದಂತೆ ಎಲ್ಲ ಚುನಾವಣೆಗಳಲ್ಲಿ ಸ್ಪರ್ಧಿಸಲು ಪಕ್ಷವು ಹೆಚ್ಚು ಸಕ್ರೀಯವಾಗಲು ನಗರದ ಹೀರಾಪುರ ವೃತ್ತದ ಬಳಿ ಇರುವ ಕಾಂತಾ ಕಾಲೋನಿಯಲ್ಲಿ ಕೇಂದ್ರ ಕಚೇರಿಯನ್ನು ಸಹ ಆರಂಭಿಸಲಾಗಿದೆ ಎಂದರು.

ಪಕ್ಷದ ಕರ್ನಾಟಕ ಮತ್ತು ಗೋವಾ ರಾಜ್ಯಗಳ ಕಾರ್ಯಾಧ್ಯಕ್ಷ, ಮಹಾರಾಷ್ಟ್ರ ರಾಜ್ಯದ ವೀಕ್ಷಕ ರಾಘಡ ರತ್ನಗಿರಿ ಸಿಂಧುರ್ಗ ಅವರು ಮಾತನಾಡಿ, ಪಕ್ಷವು ಶೋಷಿತ ಸಮುದಾಯಗಳೊಂದಿಗೆ ಎಲ್ಲ ಸಮಾಜಕ್ಕೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದರ ಜೊತೆಗೆ ಅನ್ಯಾಯ, ಅತ್ಯಾಚಾರಗಳನ್ನು ತಡೆಯುವ ಉದ್ದೇಶವನ್ನು ಹೊಂದಿದೆ ಎಂದರು.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಕಣಕ್ಕಿಳಿಯುವರು. ಗ್ರಾಮಾಂತರ ಹಾಗೂ ನಗರ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದರೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮುದಾಯ ಭವನಗಳನ್ನು ಹೊಸದಾಗಿ ನಿರ್ಮಿಸಲಾಗುವುದು. ಉನ್ನತ ವ್ಯಾಸಂಗಗಳಲ್ಲಿ ಹೆಚ್ಚಿಗೆ ಅಂಕ ಪಡೆದವರಿಗೆ ಗುರುತಿಸಿ ಅವರಿಗೆ ತಕ್ಕಂತೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ಅವರು ಹೇಳಿದರು.

ಸಮಾಜದಲ್ಲಿರುವ ಜಾತಿ ನಿರ್ಮೂಲನೆಗೆ ಹೆಚ್ಚು ಒತ್ತು ಕೊಡಲಾಗುವುದು ಎಂದು ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ವಿಲಾಸ್ ಎಂ. ಕಣಮಸ್ಕರ್, ಗೌತಮ್ ಗಮರೆ, ವಿಕಾಸ್ ಚವ್ಹಾಣ್ ಮುಂತಾದವರು ಉಪಸ್ಥಿತರಿದ್ದರು.

## ಜೇವರ್ಗಿಯಲ್ಲಿ ಮಾರ್ಚ್ 17ಕ್ಕೆ ರಾಯಣ್ಣನವರ ಹುತಾತ್ಮ ದಿನಾಚರಣೆ: 1001 ಸಾಧಕರಿಗೆ ಗೌರವ ಸಮರ್ಪಣೆ

ಜೇವರ್ಗಿ, ಮಾ.10– ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ 195ನೇ ಹುತಾತ್ಮ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಾಲುಮತ ಸಮುದಾಯ ಹಾಗೂ ಸಹೋದರ ಸಮುದಾಯಗಳ 1001 ಸಾಧಕರಿಗೆ ಗೌರವ ಸಮರ್ಪಣೆ ಸಮಾರಂಭ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸ್ವಾಭಿಮಾನಿಗಳ ಸೇನೆಯಿಂದ ಮಾರ್ಚ್ 17ರಂದು ಪಟ್ಟಣದಲ್ಲಿ ಆಯೋಜಿಸಲಾಗಿದೆ ಎಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸ್ವಾಭಿಮಾನಿಗಳ ಸೇನೆಯ ಸಂಚಾಲಕ ತಮ್ಮಣ್ಣ ಬಿ. ಬಾಗೇವಾಡಿ ಅವರು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಜೇವರ್ಗಿಯ ಧರ್ಮಸಿಂಗ್ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10.30ಕ್ಕೆ ಸಮಾರಂಭ ಜರುಗಲಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಹಾಗೂ ಕ್ಷೇತ್ರದ ಶಾಸಕ ಡಾ. ಅಜಯಸಿಂಗ್ ಅವರು ಕಾರ್ಯಕ್ರಮ ಉದ್ಘಾಟಿಸುವರು ಎಂದರು.

ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಮಾಜಿ ಶಾಸಕ ಹಾಗೂ ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ ಸೇರಿದಂತೆ ಹಲವರು ಪಾಲ್ಗೊಳ್ಳುವರು. ದಿವ್ಯ ಸಾನಿಧ್ಯವನ್ನು ಸೊನ್ನದ ಡಾ. ಶಿವಾನಂದ್ ಮಹಾಸ್ವಾಮೀಜಿ, ನೆಲೋಗಿಯ ಸಿದ್ದಲಿಂಗ ಸ್ವಾಮೀಜಿ, ಚಿಗರಹಳ್ಳಿಯ ಸಿದ್ದಬಸವ ಕಬೀರ ಮಹಾಸ್ವಾಮೀಜಿ, ಆಲೂರ್ ಮಠದ ಕೆಂಚಬಸವವೃಷಬೇಂದ್ರ ಸ್ವಾಮೀಜಿ, ಜೇರಟಗಿಯ ಸಿದ್ದಲಿಂಗ ಸ್ವಾಮೀಜಿ, ಶಖಾಪುರದ ಡಾ. ಸಿದ್ಧರಾಮ್ ಶಿವಾಚಾರ್ಯರು, ಯಡ್ರಾಮಿಯ ಸಿದ್ದಲಿಂಗ ಸ್ವಾಮೀಜಿ, ಯಲಗೋಡದ ಗುರುಲಿಂಗ ಮಹಾಸ್ವಾಮೀಜಿ, ಜೇವರ್ಗಿಯ ನಿಂಗಣ್ಣ ಶರಣ–ರು, ಅಣಜಗಿಯ ಸತ್ಯಾನಂದ್ ಮುತ್ಯಾ, ಕಲ್ಲಹಂಗರಗಾದ ಹಯ್ಯಾಳಪ್ಪ ಪೂಜಾರಿ, ಬಸವಪಟ್ಟಣದ ಮರೆಪ್ಪ ಮುತ್ಯಾ, ಮಾವನೂರಿನ ಧರ್ಮರಾಯ್ ಮುತ್ಯಾ, ಅಮೋಘಸಿದ್ಧ ಮುತ್ಯಾ ಅವರು ವಹಿಸುವರು ಎಂದು ಅವರು ಹೇಳಿದರು.

ದೇಶವು ಸ್ವಾತಂತ್ರ್ಯಗೊಂಡು 8 ದಶಕಗಳು ಆಗುತ್ತ ಬಂದರೂ ನಮ್ಮ ಹಾಲುಮತ ಸಮುದಾಯವರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ನಿರೀಕ್ಷಿತ ಪ್ರಗತಿ ಸಾಧಿಸಿಲ್ಲ. ಈ ಕುರಿತು ಜಾಗೃತಿ ಮೂಡಿಸಲು ಸಮಾರಂಭ ಆಯೋಜಿಸಲಾಗಿದೆ. ಶಾಂತಪ್ಪ ಕೂಡಲಗಿ, ಶ್ರೀಮತಿ ಶೋಭಾ ಬಾಣಿ, ಮಲ್ಲಿನಾಥ ಯಲಗೋಡ್, ದಿಲೀಪ್ ಆರ್. ಪಾಟೀಲ್, ಗುರುನಾಥ ಪೂಜಾರಿ, ರಾಜಶೇಖರ್ ಸೀರಿ, ವಸಂತ್ ನರಿಬೋಳ್, ಚಂದ್ರಶೇಖರ್ ಹರನಾಳ್, ಕಾಶಿರಾಯಗೌಡ ಯಲಗೋಡ್, ಶಂಕರ್ ಕಟ್ಟಿಸಂಗಾವಿ ಮುಂತಾದವರು ಪಾಲ್ಗೊಳ್ಳುವರು ಎಂದು ಅವರು ತಿಳಿಸಿದರು.

# ಸಂಶೋಧನೆ ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡಬೇಕು: ಪ್ರೊ. ಟಿ. ಆರ್. ಸುಬ್ರಹ್ಮಣ್ಯ

ಆಳಂದ:"ಸಂಶೋಧನಾ ವಿಷಯವು ಸಾಮಾಜಿಕವಾಗಿ ಪ್ರಸ್ತುತ ಮತ್ತು ಸಂದರ್ಭೋಚಿತವಾಗಿರಬೇಕು. ಸಂಶೋಧನಾ ವಿಷಯವನ್ನು ಆಯ್ಕೆ ಮಾಡುವಾಗ ಸಂಶೋಧಕರು ಅದರ ಪ್ರಸ್ತುತತೆ ಮತ್ತು ಸಮಾಜದಲ್ಲಿರುವ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು" ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಟಿ. ಆರ್. ಸುಬ್ರಹ್ಮಣ್ಯ ಹೇಳಿದರು.

ತಾಲೂಕಿನ ಕಡಗಂಚಿ ಬಳಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ವಿದ್ಯಾರ್ಥಿಗಳ ಕಲ್ಯಾಣಾಧಿಕಾರಿ ಕಚೇರಿ ಆಯೋಜಿಸಿದ್ದ "ವಿದ್ವತ್ಪೂರ್ಣ ಬರವಣಿಗೆಯಲ್ಲಿ ಸಂಶೋಧನೆಯ ಪ್ರಸ್ತುತತೆ" ಕುರಿತು ವಿಶೇಷ ಉಪನ್ಯಾಸವನ್ನು ಉದ್ಘಾಟಿಸಿ ಮಾತನಾಡಿದರು.

"ಐತಿಹಾಸಿಕವಾಗಿ ಸಂಶೋಧನೆಯು ಪ್ರಪಂಚದಾದ್ಯಂತ ಸಾಮಾಜಿಕ ಸುಧಾರಣೆಗಳು ಮತ್ತು ಕಾನೂನು ಬೆಳವಣಿಗೆಗಳನ್ನು ರೂಪಿಸುವಲ್ಲಿ ಹಳ ಮುಖ್ಯವಾದ ಪಾತ್ರವನ್ನು ವಹಿಸಿದೆ. 16 ನೇ ಶತಮಾನದ ವಿದ್ವಾಂಸರ ಸಂಶೋಧನಾ ಕಾರ್ಯಗಳು ಜಗತ್ತಿನ ಪ್ರಮುಖ ಕಾನೂನು ಸುಧಾರಣೆಗಳಿಗೆ ಕೊಡುಗೆ ನೀಡಿವೆ. ಸಂಶೋಧನೆಯು ನಿಜವಾದ ಸಾಮಾಜಿಕ ಸವಾಲುಗಳನ್ನು ಪರಿಹರಿಸಬೇಕು ಮತ್ತು ಅರ್ಥಪೂರ್ಣ ನೀತಿ ಮತ್ತು ಕಾನೂನು ಬದಲಾವಣೆಗೆ ಕೊಡುಗೆ



ನೀಡಬೇಕು. ಸಂಪನ್ಮೂಲಗಳ ಕೊರತೆಯ ಹೊರತಾಗಿಯೂ, ನಮ್ಮ ಹಿಂದಿನ ಸಂಶೋಧಕರು ಪ್ರಾಮಾಣಿಕತೆ ಮತ್ತು ಬದ್ಧತೆಯೊಂದಿಗೆ ಪರಿಣಾಮಕಾರಿ ಕೃತಿಗಳನ್ನು ರಚಿಸಿದ್ದಾರೆ. ವಿದ್ವಾಂಸರು ಹಿಂದಿನ ಸಂಶೋಧಕರೊಂದಿಗೆ ಧನಾತ್ಮಕ ಭಿನ್ನಾಭಿಪ್ರಾಯ ಹೊಂದದ ಹೊರತು ಹೊಸ ಜ್ಞಾನವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಭಾರತದಲ್ಲಿ ಕ್ರಿಯಾಶೀಲ ಸಂಶೋಧನಾ ಕಾರ್ಯಗಳು ನಿರ್ಭಯಾ ತಿದ್ದುಪಡಿ ಕಾಯ್ದೆ ಮತ್ತು ಕಾನೂನು ನೆರವು, ಪರಿಹಾರ ಮತ್ತು ಕಾನೂನುಗಳ ಪ್ರಾಯೋಗಿಕ ಅನುಷ್ಠಾನದಂತಹ ಕಾನೂನು ಸುಧಾರಣೆಗಳಿಗೆ ಕಾರಣವಾಗಿವೆ" ಎಂದು ಅವರು ಹೇಳಿದರು.

ಪ್ರೊ. ಟಿ. ಆರ್. ಸುಬ್ರಹ್ಮಣ್ಯ ಅವರು ಅಂತರ-ಪೀಳಿಗೆಯ ಸಮಾನತೆಯ ಪರಿಕಲ್ಪನೆ ಮತ್ತು ಸಂಶೋಧನೆಯಲ್ಲಿ ಸುಸ್ಥಿರ ಚಿಂತನೆಯ ಪ್ರಾಮುಖ್ಯತೆಯ ಕುರಿತು ಮತ್ತಷ್ಟು ಚರ್ಚಿಸಿದರು. ಜಲಪೈಗುರಿಯಲ್ಲಿ ನಡೆದ ವಾಮಾಚಾರಕ್ಕೆ ಸಂಬಂಧಿಸಿದ ಘಟನೆಗಳ ಉದಾಹರಣೆಯನ್ನು ಅವರು ಮನವೊಲಿಸುವ ಮತ್ತು ಸಾಮಾಜಿಕವಾಗಿ ಪ್ರಭಾವ ಬೀರುವ ಸಂಶೋಧನೆಯ ಉದಾಹರಣೆಯಾಗಿ ಉಲ್ಲೇಖಿಸಿದರು. ಪ್ರಸ್ತುತ ಹಾಗು ಪ್ರಮುಖ ಜಾಗತಿಕ ಸಮಸ್ಯೆಗಳ ಕುರಿತು ಅಧ್ಯಯನಗಳನ್ನು ಕೈಗೊಳ್ಳಲು ವಿದ್ವಾಂಸರನ್ನು ಪ್ರೋತ್ಸಾಹಿಸಿದರು. ವಿದ್ವಾಂಸರು ಸಂಶೋಧನಾ ಕರ್ತೃತ್ವವನ್ನು ಅಭಿವೃದ್ಧಿಪಡಿಸಲು, ಅಸ್ತಿತ್ವದಲ್ಲಿರುವ ವ್ಯವಸ್ಥೆಗಳನ್ನು ಪ್ರಶ್ನಿಸಲು, ಅನ್ವೇಷಿಸಲು ಮತ್ತು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವಂತೆ ಅವರು ಒತ್ತಾಯಿಸಿದರು.

ಸಿಯುಕೆಯ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ್, ಮಾತನಾಡಿ "ಸಂಶೋಧನೆಯ ಗುಣಮಟ್ಟ ಬಹಳ ಮುಖ್ಯ. ಸಂಶೋಧನೆಯಲ್ಲಿ ಗುಣಮಟ್ಟ, ಸ್ವಂತಿಕೆ ಮತ್ತು ಪ್ರಭಾವಶಾಲಿ ಪಾಂಡಿತ್ಯದ ಮೇಲೆ ಕೇಂದ್ರೀಕರಿಸುವುದು ಇಂದಿನ ಅಗತ್ಯವಾಗಿದೆ" ಎಂದು ಹೇಳಿದರು.

ಸಿಯುಕೆಯ ಕಾನೂನು ಅಧ್ಯಯನ ನಿಕಾಯದ ಡೀನ್ ಪ್ರೊ. ಬಸವರಾಜ್ ಎಂ. ಕುಬಕಡ್ಡಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "ಕಾನೂನು ಸಂಶೋಧನೆಯು ಸಾಮಾಜಿಕ ಅಗತ್ಯಗಳಿಗೆ ಕೊಡುಗೆ ನೀಡಬೇಕು. ಕಲಬುರಗಿ ಪ್ರದೇಶದಲ್ಲಿ 11 ನೇ ಶತಮಾನದಲ್ಲಿ ಜನಿಸಿದ ಕಾನೂನು ವಿದ್ವಾಂಸರಾದ ಸಂತ ವಿಜ್ಞಾನೇಶ್ವರರು ಸಮಾಜ ಸುಧಾರಕರಾಗಿದ್ದು, ಸಮಾಜದ ಸುಧಾರಣೆಗಾಗಿ ಶ್ರಮಿಸಿದರು ಮತ್ತು 12 ನೇ ಶತಮಾನದಲ್ಲಿ ಭಗವಾನ್ ಬಸವೇಶ್ವರರು ತಮ್ಮ ವಚನಗಳ ಮೂಲಕ ಆ ಕಾಲದ ಸಾಮಾಜಿಕ ಅನಿಷ್ಠವಾಗಿದ್ದ ತಾರತಮ್ಯವನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ಪ್ರತಿಯೊಬ್ಬ ಕಾನೂನು ವಿದ್ವಾಂಸರು ಸಮಾಜದ ಸುಧಾರಣೆಗೆ ಕೊಡುಗೆ ನೀಡುವ ರೀತಿಯಲ್ಲಿ ಕೆಲಸ ಮಾಡಬೇಕು" ಎಂದು ಅವರು ಹೇಳಿದರು.

ಡೀನ್ ಡಾ. ಮಲ್ಲಿಕಾರ್ಜುನ್ ಎಸ್. ಹೂಗರ್ ಸ್ವಾಗತಿಸಿದರು, ಡಾ. ಕೆ.ಎಂ. ಕೃಷ್ಣ ಶೇಖರ್ ಶರ್ಮಾ ನಿರೂಪಿಸಿದರು, ಡಾ. ಜಗದೀಶ್ ಚಂದ್ರ ಟಿ.ಜಿ. ಪರಿಚಯಿಸಿದರು. ಮುಖ್ಯವಾರ್ಡನ್ ಡಾ. ಬಸವರಾಜ್ ಎಂ.ಎಸ್. ವಂದಿಸಿದರು. ಶಿಕ್ಷಕರು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.



ಕಲಬುರಗಿ: ಮಾದಿಗ ಸಮುದಾಯದ ಮುಂಖಡರು, ಮತ್ತು ಮಹಾನಗರ ಪಾಲಿಕೆ ಮಾಜಿ ಸದಸ್ಯರು, ಕಲಬುರಗಿ ತಾರಫೈಲ್ ಬಡಾವಣೆಯ ಮುಖಂಡ ದಿ.ಕಮಲಾಕರ್ ಶಿವನೂರ ರವರ ಭಾವಪೂರ್ಣ ಶ್ರದ್ಧಾಂಜಲಿಯನ್ನು ನಗರದ ಡಾ.ಬಾಬುಜಗಜೀವನರಾ ಪ್ರತಿಮೆ ಬಳಿ ಕಲಬುರಗಿ ಜಿಲ್ಲಾ ಮಾದಿಗ ಸಮಾಜದ ವತಿಯಿಂದ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮುಂಖಡರಾದ ದಶರಥ ಕಲಗುರ್ತಿ, ಅಂಬಾರಾಯ ಬೆಳಕೋಟಾ, ಜಾನ್ ತಾರಫೈಲ್, ರಾಜು ಕಟ್ಟಿಮನಿ, ರಾಜು ಹದನೂರ, ಮಂಜುನಾಥ ನಾಲವಾರಕರ್, ಬಸವರಾಜ ಜವಳಿ, ಮಲ್ಲಿಕಾರ್ಜುನ ಸರಡಗಿ, ರಾಹುಲ್ ಮತ್ರೆ, ಅರವಿಂದ ನಾಟೀಕಾರ, ವಿಶಾಲ ನಿಲ್ಲೂರಕರ್, ಅವಿನಾಶ ಧಮ್ಮನಸೂರು ಸೇರಿದಂತೆ ಇನ್ನಿತರು ಭಾಗವಹಿಸಿದರು,

# ಮಕ್ಕಳನ್ನು ಮೊಬೈಲ್ ನಿಂದ ದೂರವಿಡಿ : ತಲಾರಿ



ಕಲಬುರಗಿ: ಆಳಂದ ತಾಲೂಕಿನ ಬೆಣ್ಣೆ ಶಿರೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2025-26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಎಂಟನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ವಿಜೃಂಭಣೆಯಿಂದ ಜರುಗಿತು.

ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯವನ್ನು ಪ್ರಕಾಶ ಮಹಾರಾಜರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಅಫಜಲಪೂರ ತಾಲೂಕ ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷರಾದ ರಾಜಶೇಖರ್ ತಲಾರಿ ಮಾತನಾಡುತ್ತಾ ಮಕ್ಕಳಿಗೆ ಪ್ರಾಥಮಿಕ ಹಂತದ ಶಿಕ್ಷಣ ಗುಣಮಟ್ಟದಿಂದ ಕೂಡಿದರೆ ಅವರ ಜೀವನದಲ್ಲಿ ಖಂಡಿತವಾಗಿಯೂ ಯಶಸ್ವಿಯಾಗುತ್ತದೆ ಹಾಗೂ ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ ಅವರನ್ನು ಮೊಬೈಲ್ ನಿಂದ ದೂರವಿಡಿ ಎಂದು ಪಾಲಕರಿಗೆ ಮನವಿ ಮಾಡಿಕೊಂಡರು.

ಹಣಮಂತ ಸನಾದಿ, ಭೂತಾಳಿ ಹಿರೇಪೂಜಾರಿ, ಶರಬಯ್ಯಸ್ವಾಮಿ, ಮಚೇಂದ್ರ ಪಾಟೀಲ್ ಹಾಗೂ ರಾಘವೇಂದ್ರಸ್ವಾಮಿ ಭಾಗವಹಿಸಿದರು. ಊರಿನ ಪ್ರಮುಖರಾದ ರಾಹುಲ್ ಪೊಲೀಸ್ ಪಾಟೀಲ್, ಧರ್ಮರಾವ್ ಮಾಶಾಳ್ಕರ್, ಲಕ್ಷ್ಮಣ ಸುಗೂರ್, ರವಿ ಹದಲೂರ್, ಸುರೇಶ್ ಬಂಡಗಾರ್ , ದಯಾನಂದ ತಲಾರಿ, ಸೇರಿದಂತೆ ಅನೇಕರು ಹಾಗೂ ಪಾಲಕರು ಉಪಸ್ಥಿತರಿದ್ದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸಂತೋಷ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕರಾದ ಕಲ್ಯಾಣಪ್ಪ ಅಡಕಿ ಕಾರ್ಯಕ್ರಮದ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಶಾಂತ ತೇಲಿ ಸ್ವಾಗತಿಸಿದರು. ಅಂಬಿಕಾ ಹಾಗೂ ಸಂಗಡಿಗರು ಪ್ರಾರ್ಥನಾ ಗೀತೆ ಹಾಡಿದರು. ಸಂತೋಷ್ ಕುಮಾರ್ ಮೇಲ್ಕೆರಿ ಮತ್ತು ಸಂತೋಷ್ ಕುಮಾರ್ ಬಿರಾದಾರ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಾಲೆಯ ಅತಿಥಿ ಶಿಕ್ಷಕರಾದ ರಾಜಶೇಖರ ಮಾಶಾಳಕರ, ಲಕ್ಷ್ಮಿಪುತ್ರ ವಾಗ್ಮೊಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಮಾರಂಭದ ಕೊನೆಯಲ್ಲಿ ಕಲ್ಲಪ್ಪ ಭುಜರಿ ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ನೀಡಿ, ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಎಲ್ಲರೂ ಶುಭ ಹಾರೈಸಿದರು.

# ಮಕ್ಕಳ ದುಡಿಮೆ ನಿರ್ಮೂಲನೆಗಾಗಿ ಜಾಗೃತಿ ಅಭಿಯಾನ ಅಂಗಡಿ ಮಾಲೀಕರಿಗೆ ಜಾಗೃತಿ ಕರಪತ್ರ ವಿತರಣೆ

ಆಳಂದ್: "ಈ ಪನ್ ಇಂಡಿಯಾ (ಕಂಓ ಖಟಿಜುಚಿ) ಅಭಿಯಾನವು ಕೇವಲ ತಪಾಸಿನಲ್ಲಿಯೇ ಸೀಮಿತವಲ್ಲ; ಇದು ಸಮಾಜದಲ್ಲಿ ಮಕ್ಕಳ ದುಡಿಮೆಯನ್ನು ಸಂಪೂರ್ಣ ನಿರ್ಮೂಲನ ಮಾಡುವ ದೊಡ್ಡ ಉದ್ದೇಶ ಹೊಂದಿದೆ ಎಂದು ಜಿಲ್ಲಾ ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕ ರವೀಂದ್ರ ಕುಮಾರ್ ಬಲ್ಲೂರ್ ಹೇಳಿದರು.

ಪಟ್ಟಣದಲ್ಲಿ ಬಾಲಕಾರ್ಮಿಕ ತಾಲೂಕು ಮಟ್ಟದ ಮಕ್ಕಳ ಟಾಸ್ಕ್‌ಪೋರ್ಸ ಸಮಿತಿ ವಿವಿಧೆಡೆ ಹಮ್ಮಿಕೊಂಡ ಬಾಲಕಾರ್ಮಿಕ ಜಾಗೃತಿ ಅಭಿಯಾನದಲ್ಲಿ ಜಾಗೃತಿ ಕರಪತ್ರಗಳನ್ನು ವಿತರಿಸಿ ಅರಿವು ಮೂಡಿಸಿ ಅವರು ಮಾತನಾಡಿದರು.

ಆಳಂದದಂತಹ ಪಟ್ಟಣಗಳಲ್ಲಿ ಹಲವು ಅಂಗಡಿಗಳು, ಗ್ಯಾರೇಜ್‌ಗಳು ಮತ್ತು ಹೋಟೆಲ್‌ಗಳಲ್ಲಿ 18 ವರ್ಷದ ಕೆಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದು ಸಾಮಾನ್ಯವಾಗಿದೆ. ಇದು ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಭವಿಷ್ಯದ ಅಭಿವೃದ್ಧಿಗೆ ದೊಡ್ಡ ಹಾನಿಯಾಗುತ್ತದೆ. ನಾವು ಇಂದು ವಿತರಿಸಿದ ಕರಪತ್ರಗಳು ಮತ್ತು ಸ್ಟಿಕ್ಕರ್‌ಗಳು ಅಂಗಡಿ



ಮಾಲೀಕರಿಗೆ ನೆನಪಿನ ಚಿಹ್ನೆಗಳಾಗಿ ಕಾರ್ಯನಿರ್ವಹಿಸುತ್ತವೆ. ಯಾವುದೇ ಅಂಗಡಿಯಲ್ಲಿ ಮಕ್ಕಳ ದುಡಿಮೆ ಕಂಡರೆ, ತಕ್ಷಣ ಮಕ್ಕಳ ಸಹಾಯವಾಣಿ 1098ಗೆ ಸಾರ್ವಜನಿಕರು ಕರೆ ಮಾಡಿ ಮಾಹಿತಿ ನೀಡಿ. ಇದರಿಂದ ನಾವು ಮಕ್ಕಳನ್ನು ರಕ್ಷಿಸಿ, ಅವರ ಭವಿಷ್ಯವನ್ನು ಉಜ್ವಲಗೊಳಿಸಬಹುದು" ಮಕ್ಕಳ ದುಡಿಮೆಯ ಅಪಾಯಗಳು, ಕಾನೂನು ದಂಡನೆಗಳು ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ಮಹತ್ವದ ಬಗ್ಗೆ ಅರಿವು ತಂದುಕೊಳ್ಳಬೇಕು ಎಂದು ಹೇಳಿದರು.

"ಬಾಲಕಾರ್ಮಿಕ ಕಾಯ್ದೆ 1986 ಮತ್ತು ಎನ್‌ಸಿಪಿಸಿಆರ್ ನಿಯಮಗಳ ಪ್ರಕಾರ, ಮಕ್ಕಳನ್ನು ಯಾವುದೇ ರೀತಿಯ ಕೆಲಸಕ್ಕೆ ಬಳಸಿಕೊಳ್ಳುವುದು ಕಾನೂನುಬಾಹಿರವಾಗಿದ್ದು, ಇದ-ಕ್ಕೆ ದಂಡನೆಯಾಗಿ ದಂಡಕ್ಕೂ ಜೇಲು ಶಿಕ್ಷೆಯೂ ಇದೆ. ಈ ಅಭಿಯಾನದ ಮೂಲಭೂತ ಉದ್ದೇಶವೇ ಮಕ್ಕಳನ್ನು ರಕ್ಷಿಸಿ, ಅವರನ್ನು ಶಾಲೆಗೆ ಕಳುಹಿಸುವುದು. ಆಳಂದದಲ್ಲಿ ನಾವು ಇಂದು 50ಕ್ಕೂ ಹೆಚ್ಚು ಉದ್ಯಮಗಳನ್ನು ಪರಿಶೀಲಿಸಿದ್ದೇವು ಮತ್ತು ಹಲವು ಸ್ಥಳಗಳಲ್ಲಿ ಮಕ್ಕಳ ದುಡಿಮೆಯ ಸಾಧ್ಯತೆಗಳನ್ನು ಗುರುತಿಸಿದ್ದೇವು. ಮಾಲೀಕರುಗಳು ಸಹಕಾರ ನೀಡಿದ್ದಾರೆ, ಆದರೆ ಇದು ಏಕಕಾಲದ ಕಾರ್ಯವಲ್ಲ; ನಿರಂತರ ಜಾಗೃತಿ ಮೂಲಕ ಮಾತ್ರ ಸಾಧ್ಯ. ಪೋಷಕರೂ ಸಹ ಮಕ್ಕಳನ್ನು ಕೆಲಸಕ್ಕೆ ಕಳುಹಿಸದಂತೆ ಗಮನ ಹರಿಸಬೇಕು. ನಮ್ಮ ಯೋಜನಾ ಸೂಸೈಟಿ ಮೂಲಕ ರಕ್ಷಣೆ ಪಡೆದ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇವೆಗಳು ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒದಗಿಸುತ್ತೇವು" ಎಂದು ತಿಳಿಸಿದರು.

ಪಟ್ಟಣದ ವಿವಿಧ ಉದ್ಯಮಗಳಾದ ಗ್ಯಾರೇಜ್‌ಗಳು, ಬೇಕರಿಗಳು, ಕಿರಾಣಿ ಅಂಗಡಿಗಳು, ಹೋಟೆಲ್‌ಗಳು, ಬಾರ್‌ಗಳು ಸೇರಿದಂತೆ ಇತರ ಸ್ಥಳಗಳ ಮೇಲೆ ಆಕಸ್ಮಿಕ ಭೇಟಿ ನೀಡಿದ ತಂಡವು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ, ಅಂಗಡಿ ಮಾಲೀಕರಿಗೆ ಜಾಗೃತಿ ಕರಪತ್ರಗಳು ಮತ್ತು ಸ್ಟಿಕ್ಕರ್‌ಗಳನ್ನು ವಿತರಿಸಿ, 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳಬಾರದು ಎಂಬ ಅರಿವನ್ನು ಮೂಡಿಸಲಾಯಿತು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೂಸೈಟಿಯ ಯೋಜನಾ ನಿರ್ದೇಶಕ ಸಂತೋಷ ಕುಲಕರ್ಣಿ, ಶಿಕ್ಷಣ ಇಲಾಖೆಯ ಬ್ಲಾಕ್ ರಿಸೋರ್ಸ್ ಸಿಆರ್‌ಪಿಗಳಾದ ಸೈಯದ್ ಅಹ್ಮದ್, ಖಾಸೀಂ ಸೋಲಾಪೂರ, ಈರಣ್ಣಾ ಬೋಳಶೆಟ್ಟಿ, ನಾಗನಾಥ, ಎಚ್.ಎಂ. ರಾಜಶೇಖರ, ಪಿಸಿ ಜಾಕೀರ ಎಂ ಮತ್ತು ಮಕ್ಕಳ ಸಹಾಯವಾಣಿ ಜಿಲ್ಲಾ ಸಂಯೋಜಕ ಬಸವರಾಜ್ ಟೆಂಗಳಿ, ಮಾರ್ಗದರ್ಶಿ ಸಂಸ್ಥೆಯ ಸಿಬ್ಬಂದಿ ಆನಂದ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಅಳ್ಳೊಳ್ಳಿ ನಿರ್ಗತಿಕ ಮಹಿಳೆಗೆ ಧರ್ಮಸ್ಥಳ ಸಂಸ್ಥೆಯಿಂದ ವಾತ್ಸಲ್ಯ ಮನೆ..!

ಚಿತ್ತಾಪುರ,ಮಾ.10-ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮದ ನಿರ್ಗತಿಕ ಮಹಿಳೆಯೊಬ್ಬರಿಗೆ ಧರ್ಮಸ್ಥಳ



ಗ್ರಾಮಾಭಿವೃದ್ಧಿ ಸಂಸ್ಥೆ ಅಧಿಕಾರಿಗಳು "ವಾತ್ಸಲ್ಯ ಮನೆ" ಯೋಜನೆಯಲ್ಲಿ ನಿರ್ಮಿಸಲಾದ ಮನೆ ಹಸ್ತಾಂತರ ಮಾಡಿದರು.

2025-26ನೇ ಸಾಲಿನ ಮಾಶಾಸನ ಫಲಾನುಭವಿ "ವಾತ್ಸಲ್ಯ ಮನೆ" ಈ ಯೋಜನೆಯಲ್ಲಿ 1.35 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಿ ಅಳ್ಳೊಳ್ಳಿ ಗ್ರಾಮದ ನಿವಾಸಿ ಮಹಾದೇವಿ ಮತ್ತಗಿ ಎನ್ನುವ ಮಹಿಳೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವಸತಿ ಸೌಲಭ್ಯ ನೀಡಿ ನೆರವಾಗಿದೆ.

ಈ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಕ್ಷೇತ್ರ ಯೋಜನಾಧಿಕಾರಿ ಗುರುರಾಜ್ ಬಿ, ಅವರು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸಂಸ್ಥಾಪಕ ಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಹಾಗೂ ಮಾಲಾಶ್ರೀ ಹೇಮಾವತಿ ಅಮ್ಮನವರ ಆಶಯದಂತೆ ಅನೇಕ ಬಡ ಕುಟುಂಬಗಳಿಗೆ ಆಸರೆ ನೀಡುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಧರ್ಮಸ್ಥಳ ಸಂಸ್ಥೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಿರಂತರ ಸಮಾಜಮುಖಿ ಕಾರ್ಯಗಳು ಮಾಡುತ್ತಿದೆ ಇದರಿಂದ ಜನರಿಗೆ ತುಂಬಾ ಅನುಕೂಲವಾಗಿದೆ ಎಂದು ಹೇಳಿದರು.

ಅಳ್ಳೊಳ್ಳಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಜಕ್ಕಪ್ಪ ಪೂಜಾರಿ, ಗ್ರಾಮದ ಮುಖಂಡರಾದ ಶರಣು ಆಡಕಿ, ಚನ್ನಪ್ಪ ಮುತ್ತಗಿ, ಚಂದ್ರು ರೆಡ್ಡಿ, ಯಂಕಪ್ಪ ವಿ. ಕಟ್ಟಿಮನಿ, ಜ್ಞಾನವಿಕಾಸ ಯೋಜನಾಧಿಕಾರಿ ಜ್ಯೋತಿಜೋಳದ, ಸಮನ್ವಯಾಧಿಕಾರಿ ಅರ್ಚನ ಕುಲಗುಡೆ, ವಲಯ ಮೇಲ್ವಿಚಾರಕ ಮಂಜುನಾಥ್ ಹಿರೇಮಠ, ಸೇವಾ ಪ್ರತಿನಿಧಿಗಳಾದ ಅಕ್ಷತಾ ಜಮಾದಾರ್, ಕ್ಯಾದಿಗೆ ಹಳಬಣ್ಣರ, ಅಂಬಿಕಾ, ಭಾಗ್ಯಶ್ರೀ ತಿಂಗಳಿಗೆ ಸೇರಿದಂತೆ ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.




# ಅನುದಾನ ದುರ್ಬಳಕೆ: ಅಂತರ್ರಾಷ್ಟ್ರೀಯ ಸಮ್ಮೇಳನ ಮುಂದೂಡಿಕೆಗೆ ಭಂತೆ ಧಮ್ಮನಾಗ ಆಗ್ರಹ

ಬೀದರ್, ಮಾ.10- ಇದೇ ಮಾರ್ಚ್ 14 ಮತ್ತು 15 ರಂದು ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜನೆ ಮಾಡಲಾಗಿದೆ ಎನ್ನಲಾಗುತ್ತಿರುವ ಅಂಬೇಡ್ಕರ್ ಅವರ ಕುರಿತಾದ ವಿಚಾರಗಳ ಅಂತರಾಷ್ಟ್ರೀಯ ಸಮ್ಮೇಳನಕ್ಕಾಗಿ ಸರ್ಕಾರ 70 ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡಿದೆ. ಆದರೆ ಇದುವರೆಗೆ ಸಮ್ಮೇಳನದ ಮಾಹಿತಿಯನ್ನು ಬಹಿರಂಗಪಡಿಸದೆ ಅನುದಾನ ದುರ್ಬಳಕೆ ಮಾಡಿಕೊಳ್ಳುವ ಹುನ್ನಾರ ನಡೆದಿದೆ ಎಂದು ಬಸವಕಲ್ಯಾಣ ತಾಲ್ಲೂಕಿನ ಹತ್ಯಾಳದ ಕರ್ನಾಟಕ ಶರಣ್ ಬಹುದೇಶಿಯ ಸೇವಾಭಾವಿ ಸಂಸ್ಥೆಯ ಅಧ್ಯಕ್ಷ ಮತ್ತು ಅಂತರಾಷ್ಟ್ರೀಯ ಬೌದ್ಧ ಭಿಕ್ಕು ಸಂಘದ ಉಪಾಧ್ಯಕ್ಷ ಭಂತೆ ಧಮ್ಮನಾಗ ಅವರು ಆರೋಪಿಸಿದರು.

ಮಂಗಳವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಸಮಕಾಲೀನ ಪರಿಹಾರಗಳು ಕುರಿತು ಅಂತರಾಷ್ಟ್ರೀಯ ಸಮ್ಮೇಳನ ಆಯೋಜನೆಗಾಗಿ 2023ರಿಂದ ನಿರಂತರವಾಗಿ ನಾನು ಪ್ರಯತ್ನ ಮಾಡುತ್ತ ಬಂದಿದ್ದೇನೆ. ಹೀಗಾಗಿ ಸರ್ಕಾರವು ಅಂಬೇಡ್ಕರ್ ಸಂಶೋಧನಾ ಕೇಂದ್ರದ ವತಿಯಿಂದ 70 ಲಕ್ಷ ರೂ.ಗಳ ಅನುದಾನವನ್ನು ಕಳೆದ 2025ರ ಸೆಪ್ಟೆಂಬರ್ ತಿಂಗಳಿನಲ್ಲಿ ಬಿಡುಗಡೆ ಕೂಡಾ ಮಾಡಿದೆ. ಆದರೆ ನನಗೆ ಹಾಗೂ ಅಂಬೇಡ್ಕರವಾದಿ ಸಂಘ-ಸಂಸ್ಥೆಗಳಿಗೆ ಮಾಹಿತಿ ನೀಡದೆ, ಯಾವುದೇ ಪೂರ್ವಭಾವಿ ಸಭೆ ಮಾಡದೆ, ಸಮ್ಮೇಳನದ ಯಶಸ್ವಿಗಾಗಿ ಇ-ಟೆಂಡರಿಂಗ್ ಕರೆಯದೆ, ಸಮಿತಿ ಉಪಸಮಿತಿಗಳನ್ನು ರಚನೆ ಮಾಡದೆ ತರಾತುರಿಯಲ್ಲಿ ನಾಲ್ಕೇ ದಿನದಲ್ಲಿ ಅಂತರಾಷ್ಟ್ರೀಯ



ಸಮ್ಮೇಳನ ಮಾಡಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಅನುದಾನ ದುರ್ಬಳಕೆ ಮಾಡಿಕೊಳ್ಳುವ ಹುನ್ನಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಆದ್ದರಿಂದ ಕೂಡಲೇ ಸಮ್ಮೇಳನವನ್ನು ಎರಡು ತಿಂಗಳು ಮುಂದೂಡಬೇಕು. ಅಂತರಾಷ್ಟ್ರೀಯ ಮಟ್ಟದ ಅತಿಥಿಗಳನ್ನು ಬೀದರ ನಗರಕ್ಕೆ ಕರೆಸಿ ಡಾ. ಬಾಬಾ ಸಾಹೇಬರ ವಿಚಾರಧಾರೆಗಳನ್ನು ವಿಶ್ವಮಟ್ಟದಲ್ಲಿ ತಿಳಿಸುವ ಪ್ರಯತ್ನ ಮಾಡಬೇಕು. ನಾನು ಈಗಾಗಲೇ ಜಪಾನ್, ಜರ್ಮನಿ, ಸೌಥ್ ಆಫ್ರಿಕಾ, ಲಂಡನ್ ಹಾಗೂ ರಷ್ಯಾ ದೇಶದ ಅತಿಥಿಗಳನ್ನು ಆಹ್ವಾನ ಮಾಡಿದ್ದೆ. ಸಮ್ಮೇಳನದ ಆಯೋಜನೆಗಾಗಿ ಹಗಲಿರುಳು ಶ್ರಮಿಸಿದ್ದೇನೆ. ಆದರೆ ಇದುವರೆಗೆ ಆಮಂತ್ರಣ ಪತ್ರಿಕೆ, ಕಟೌಟ್‌ಗಳು, ಬ್ಯಾನರ್‌ಗಳು ಹಾಗೂ ಪ್ರಚಾರ ಕಾರ್ಯ ಮಾಡದೆ ಸಮ್ಮೇಳನದ ಆಶಯಗಳನ್ನು ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ ಅವರ ಚಿಂತನೆಗಳನ್ನು ಗಾಳಿಗೆ ತೂರುವ ಕಾರ್ಯ ಮಾಡುತ್ತಿರುವ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು. ಸಮಾಜದ ಮುಖಂಡರು ಕುರುಡ ಕಿವುಡರಾಗಿ ಕುಳಿತುಕೊಳ್ಳದೆ ಹೋರಾಟ ಮಾಡಬೇಕಾಗಿದೆ. ಇಲ್ಲದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಅತಿಥಿಗಳ ಆಹ್ವಾನ, ವಸತಿ ವ್ಯವಸ್ಥೆ, ಗೌರವಧನ, ಪ್ರಯಾಣದರದಂತಹ ನಿರ್ಣಾಯಕ ಸೇವೆಗಳಿಗೆ ಇ ಟೆ-ಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಿಲ್ಲ. ಪ್ರಶಸ್ತಿಗಳು ಒಂದೇ ಕಂಪೆನಿಗೆ ಅಥವಾ ಬಹು ಮಾರಾಟಗಾರರಿಗೆ ಹೋಗಿವೆಯೇ ಎಂಬುದು ಅನುಮಾನಾಸ್ಪದವಾಗಿದೆ. ಕಾಟಾಚಾರದ ಅಂತರಾಷ್ಟ್ರೀಯ ಸಮ್ಮೇಳನ ಮಾಡಿ ಅನುದಾನ ದುರ್ಬಳಕೆ ಮಾಡಿಕೊಳ್ಳದೆ ಸಮಾಜದ ಸಂಘಟನೆಗಳನ್ನು ಪರಿಗಣನೆಗೆ ತೆಗೆದುಕೊಂಡು ಯಶಸ್ವಿಯಾಗಿ ಸಮ್ಮೇಳನ ಮಾಡಬೇಕು. ಇಲ್ಲದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅಥವಾ ಸಮಾಜ ಕಲ್ಯಾಣ ಇಲಾಖೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಗುವುದು. ಅದಕ್ಕೂ ಬಗ್ಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಭಂತೆ ಸಂಘಜ್ಯೋತಿ ಸೇರಿದಂತೆ ಇನ್ನಿತರ ಬೌದ್ಧ ಭಿಕ್ಕುಜಿಯವರು ಉಪಸ್ಥಿತರಿದ್ದರು.

# ನಾರಂಜಾ ಸಕ್ಕರೆ ಕಾರ್ಖಾನೆಯಲ್ಲಿ ಮಾರ್ಚ್ 13ಕ್ಕೆ ಕಬ್ಬು ನುರಿಸುವ ಕಾರ್ಯ ಸ್ಥಗಿತ

ಬೀದರ್, ಮಾ.- ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆಯ 2025-26ರ ಕಬ್ಬು ಅರೆಯುವ ಹಂಗಾಮನ್ನು ಮಾರ್ಚ್ 13ರಂದು ಮುಕ್ತಾಯಗೊಳಿಸಲು ನಿರ್ಧರಿಸಲಾಗಿದೆ ಎಂದು ಕಾರ್ಖಾನೆಯ ಅಧ್ಯಕ್ಷ ಸೂರ್ಯಕಾಂತ್ ಇ. ನಾಗಮಾರಪಳ್ಳಿ ಅವರು ತಿಳಿಸಿದ್ದಾರೆ.

ಆದಕಾರಣ ಯಾವುದೇ ಸದಸ್ಯ ರೈತರು, ಸದಸ್ಯೇತರ ರೈತರು ತಮ್ಮ ಕಬ್ಬು ನುರಿಸಲು ಬಾಕಿ ಇದ್ದರೆ ಅಂಥವರು ಕಾರ್ಖಾನೆ ವಿಭಾಗಿಯ ಕಾರ್ಯಾಲಯಕ್ಕೆ ಭೇಟಿ ನೀಡಿ ಕಟಾವು ಆದೇಶ ಪಡೆದುಕೊಂಡು ಕಬ್ಬನ್ನು ಕಟಾವು ಮಾಡಿ ಮಾರ್ಚ್ 13ರಂದು ಸಾಯಂಕಾಲ ಐದು ಗಂಟೆಯೊಳಗಾಗಿ ಕಾರ್ಖಾನೆಗೆ ಸಾಗಿಸುವ ವ್ಯವಸ್ಥೆ ಮಾಡಬೇಕು. ನಂತರ ಸದಸ್ಯ ರೈತರ ಉಳಿದ ಕಬ್ಬಿಗೆ ಕಾರ್ಖಾನೆಯವರು ಯಾವುದೇ ರೀತಿಯಾಗಿ ಜವಾಬ್ದಾರರು ಅಲ್ಲ ಎಂದು ಅವರು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

# ರಾಜ್ಯ ಬಜೆಟ್‌ನಲ್ಲಿ ಬ್ರಾಹ್ಮಣ ಸಮುದಾಯದ ನಿರ್ಲಕ್ಷ್ಯ: ಮೋರಖಂಡಿಕರ್ ಆರೋಪ

ಬೀದರ್,ಮಾ.-ಅಲ್ಪಸಂಖ್ಯಾತರ ಓಲೈಕೆ ಬಹುಸಂಖ್ಯಾತರಿಗೆ ಟಾಂಗ್,



ಬ್ರಾಹ್ಮಣ ಸಮುದಾಯವನ್ನು ರಾಜ್ಯದ ಬಜೆಟ್ ನಿರ್ಲಕ್ಷಿಸಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ರಾಜಕೀಯ ವೇದಿಕೆ ಮತ್ತು ರಾಜ್ಯ ಸಂಘಟನಾ ಮಾಜಿ ಕಾರ್ಯದರ್ಶಿ ಹಾಗೂ ಮಾಜಿ ಜಿಲ್ಲಾ ಅಧ್ಯಕ್ಷ ವೆಂಕಟೇಶ್ ಮೋರಖಂಡಿಕರ್ ಅವರು ಆರೋಪಿಸಿದ್ದಾರೆ.

ಸಮಾನತೆ, ಸರ್ವ ಜನಾಂಗದ ಶಾಂತಿಯ ತೋಟ ಎಂಬುವುದೇ ನಮ್ಮ ಸರ್ಕಾರದ ಧ್ಯೇಯ ಹಾಗೂ ಸಿದ್ಧಾಂತ ಎಂದು ಹೇಳುವ ಸಿಎಂ ಸಿದ್ದರಾಮಯ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಒಂದು ನಯಾ ಪೈಸ ಅನುದಾನ ಕೊಡದೇ ತಾರತಮ್ಯ ನೀತಿ ತೋರಿಸುತ್ತಿರುವುದು ಅವರ ನುಡಿ ಹಾಗೂ ನಡೆಯಲ್ಲಿ ದ್ವಂದ್ವ ನಿಲುವು ಇರುವುದು ಬಹಿರಂಗವಾಗಿದೆ ಎಂದು ಅವರು ಹೇಳಿಕೆಯಲ್ಲಿ ದೂರಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರದಲ್ಲಿ ರಚನೆಗೊಂಡ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಬ್ರಾಹ್ಮಣರ ಅಭಿವೃದ್ಧಿಗಾಗಿ 25 ಕೋಟಿ ರೂ.ಗಳು ಮಂಡಳಿಯ ಯೋಜನೆಗಳಿಗಾಗಿ ನೀಡಿರುತ್ತಾರೆ, ತದನಂತರ ಕಾಲದಲ್ಲಿ ಬಂದಿರುವ ಯಾವುದೇ ಸರ್ಕಾರ ಇಲ್ಲಿಯ ತನಕ ಅಭಿವೃದ್ಧಿಯ ಮಂಡಳಿಗೆ ಬಜೆಟ್‌ನಲ್ಲಿ ಅನುದಾನ ನೀಡದೆ ಇರುವುದು ಬ್ರಾಹ್ಮಣ ಸಮುದಾಯವನ್ನು ಬೇಕೆಂದಲೇ ನಿರ್ಲಕ್ಷಿಸಿದ್ದಾರೆ, ಹಿಂದಿನ ಸಾಲಿನ ಅಧ್ಯಕ್ಷರಾದ ಸಚ್ಚಿದಾನಂದ ಮೂರ್ತಿ ಅವರು 10 ಕೋಟಿ ರೂಗಳ ಅನುದಾನವನ್ನು ಪ್ರತಿವರ್ಷ ಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು. ವಿಪರ್ಯಾಸವೆಂದರೆ ಆ 10 ಕೋಟಿ ರೂ.ಗಳು ಸಿಬ್ಬಂದಿಯ ವೇತನ ಜಾಗದ ಬಾಡಿಗೆ ಕೊಡುವುದಕ್ಕೆ ಸರಿಯಾಗುತ್ತಿಲ್ಲ ಇದರಿಂದ ವಿಪ್ರ ಸಮುದಾಯದ ಅಭಿವೃದ್ಧಿ ಹೇಗೆ ಸಾಧ್ಯ? ಎಂದು ಅವರು ಖಾರವಾಗಿ ಪ್ರಶ್ನಿಸಿದ್ದಾರೆ.

ತಿಂಡಿ ತಿನಿಸು ಮಾರಾಟ ಮಾಡುವ ವಾಹನ ನೀಡುವ ಯೋಜನೆ ಎಲ್ಲಾ ನಿಗಮಕ್ಕೂ, ನೀಡಲು ಸರ್ಕಾರ ಇತ್ತೀಚಿಗೆ ಜಾಹೀರಾತು ಪ್ರಕಟಿಸಿತ್ತು, ಆದ-ರೆ ಅದರಲ್ಲೂ ಸಹ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಒಂದೇ ಒಂದು ವಾಹನವು ನೀಡುವ ಕೆಲಸ ಸರ್ಕಾರದಿಂದ ಆಗಿಲ್ಲ, 2024-25 ಸಾಲಿನ ವಿದ್ಯಾರ್ಥಿಗಳಿಗೆ ನೀಡುವ ಸಹಾಯಧನ ಇನ್ನೂ ಸಹ ಯಾವುದೇ ವಿದ್ಯಾರ್ಥಿಗಳಿಗೆ ಸಿಕ್ಕಿಲ್ಲ, ಸ್ವಾವಲಂಬಿ ಜೀವನ ನಡೆಸಲು ಸಾಲ ಸೌಲಭ್ಯ ಯೋಜನೆಗೆ ಅರ್ಜಿ ಕರೆಯಲಾಗಿತ್ತು, ಸಾವಿರಾರು ಜನ ಫಲಾನುಭವಿಗಳು ಮಂಜೂರಾತಿ ಪತ್ರ ಸಿಗುವ ನಿರೀಕ್ಷೆಯಲ್ಲಿ ಕುಳಿತಿದ್ದಾರೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ 21 ವಿಧಾನಸಭಾ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರ ಮತದಾರರಾಗಿರುವ, 35ರಿಂದ 40 ಲಕ್ಷ ಜನಸಂಖ್ಯೆ ಇರುವ ಬ್ರಾಹ್ಮಣ ಸಮಾಜವನ್ನು ಕಡೆಗಣಿಸುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದ್ದು, ಈ ಕೂಡಲೇ ಕರ್ನಾಟಕ ಸರ್ಕಾರ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಯೋಜನೆಗಳಿಗೆ ಕನಿಷ್ಠ 120 ಕೋಟಿ ರೂಗಳನ್ನು ಅನುದಾನವಾಗಿ ನೀಡಬೇಕಾಗಿ ಕರ್ನಾಟಕದ ಎಲ್ಲಾ ಬ್ರಾಹ್ಮಣ ಸಮುದಾಯದ ಪರವಾಗಿ ಅವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

# ಬೀದರ್‌ನಲ್ಲಿ ಮಾರ್ಚ್ 27ರಂದು ಚೌಡಾರ ಕೆರೆ ಸತ್ಯಾಗ್ರಹದ ಬಹಿರಂಗ ಸಮಾವೇಶ

ಬೀದರ್,ಮಾ.-ಇದೇ ಮಾರ್ಚ್ 27 ರಂದು ಸಾಯಂಕಾಲ 5




ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಆಲ್ ಇಂಡಿಯಾ ಪ್ಯಾಂಥರ ಸೇನಾ ಜಿಲ್ಲಾ ಘಟಕದ ವತಿಯಿಂದ ಚೌಡಾರ ಕೆರೆ ಸತ್ಯಾಗ್ರಹ ದಿನದ ಅಂಗವಾಗಿ ಸಾಮಾಜಿಕ ಸಬಲೀಕರಣ ದಿನದಂದು ಬೃಹತ್ ಬಹಿರಂಗ ಸಮಾವೇಶ ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಆಲ್ ಇಂಡಿಯಾ ಪ್ಯಾಂಥರ ಸೇನಾ ಜಿಲ್ಲಾಧ್ಯಕ್ಷ ಭರತ ಕಾಂಬಳೆ ಅವರು ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 99 ವರ್ಷಗಳ ಹಿಂದೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಸ್ಪೃಶ್ಯರಿಗೆ ಕುಡಿಯುವ ನೀರಿಗೂ ನಿರ್ಬಂಧನೆ ಹಾಕಿ ನರಕಯಾತನೆ ಅನುಭವಿಸುವಂತೆ ಮಾಡಿದ್ದರು. ನಾಯಿ ನರಿ ಹಂದಿಗಳು ಕೆರೆಯ ನೀರು ಕುಡಿಯಬಹುದಿತ್ತು. ಆದರೆ ಮನುಷ್ಯರಾಗಿರುವ ಅಸ್ಪೃಶ್ಯರಿಗೆ ಕೆರೆಯ ನೀರು ಕುಡಿಯುವ ಹಕ್ಕಿರಲಿಲ್ಲ. ಇಂತಹ ದುಷ್ಟವ್ಯವಸ್ಥೆಯ ವಿರುದ್ಧ ಡಾ. ಬಾಬಾಸಾಹೇಬರು ಹೋರಾಡಿ ಚೌಡಾರ ಕೆರೆ-ಯ ನೀರು ಪ್ರತಿಯೊಬ್ಬರೂ ಕುಡಿಯುವಂತೆ ಮಾಡಿದ್ದು ಇತಿಹಾಸ. ಈ ಇತಿಹಾಸವನ್ನು ನೆನಪಿಸಲು ಪ್ರತೀ ವರ್ಷ ಬಹಿರಂಗ ಸಮಾವೇಶ ಮಾಡಲಾಗುತ್ತಿದೆ ಎಂದರು.

ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯ ವಹಿಸಿ ಉಪನ್ಯಾಸ ನೀಡಲು ಯಮಕನಮರಡಿಯ ಶ್ರೀ ಜಗದ್ಗುರು ಶೂನ್ಯ ಸಂಪಾದನಾ ಹುಣಸಿಕೊಳ್ಳ ಮಠದ ಉತ್ತರಾಧಿಕಾರಿ ಸಿದ್ಧಬಸವ ದೇವರು ಆಗಮಿಸಲಿದ್ದಾರೆ. ಆಲ್ ಇಂಡಿಯಾ ಪ್ಯಾಂಥರ್ ಸೇನೆಯ ರಾಷ್ಟ್ರೀಯ ಅಧ್ಯಕ್ಷ ದೀಪಕ ಕೇದರ ಆಗಮಿಸಿ ಮಾರ್ಗದರ್ಶನ ಮಾಡಲಿದ್ದಾರೆ. ಜೊತೆಗೆ ಮಹಾರಾಷ್ಟ್ರದ ಪ್ರಖರ ವಾಗ್ಮಿ ಸುಷ್ಮಾತಾಯಿ ಅಂದಾರೆ, ಸಚಿವ ಎಚ್.ಸಿ. ಮಹದೇವಪ್ಪ ಅಥವಾ ಸಚಿವ ಸತೀಶ ಜಾರಕಿಹೊಳಿ ಇಬ್ಬರಲ್ಲಿ ಒಬ್ಬರು ಜೊತೆಗೆ ಕಲಬುರ್ಗಿಯ ಮಹಿಳಾ ಹೋರಾಟಗಾರ್ತಿ ಕೆ.ನೀಲಾ ಆಗಮಿಸಲಿದ್ದಾರೆ. ಅಂದು ಕರ್ನಾಟಕ ಮಹಾರಾಷ್ಟ್ರದ ಹಿತಚಿಂತಕರು ಸೇರಿದಂತೆ ನಾಲ್ಕೈದು ಸಾವಿರ ಜನ ಸೇರಲಿದ್ದಾರೆ ಎಂದು ಭರತ ಕಾಂಬಳೆ ಮಾಹಿತಿ ನೀಡಿದರು. ಅಲ್ಲದೇ ನಮ್ಮ ಸಮಾಜದಲ್ಲಿ ಶಿಕ್ಷಣದ ಕೊರತೆಯಿದ್ದು, ಬಾಬಾ ಸಾಹೇಬರ ತತ್ವಾದರ್ಶಗಳನ್ನು ಅರ್ಥಮಾಡಿಕೊಳ್ಳಲು ಒಂದಿಷ್ಟು ಆಗುತ್ತಿಲ್ಲ ಎನ್ನುವ ನೋವಿದೆ. ಅದನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದು ಅವರು ಹೇಳಿದರು.

ಗೌರವಾಧ್ಯಕ್ಷ ದೇವೇಂದ್ರ ಆರ್. ಸೋನಿ ಅವರು ಮಾತನಾಡಿ, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ, ಪೌರಾಡಳಿತ ಸಚಿವ ರಹಿಂಖಾನ್, ಸಂಸದ ಸಾಗರ ಈಶ್ವರ ಖಂಡ್ರೆ ಸೇರಿದಂತೆ ಜಿಲ್ಲೆಯ ಎಲ್ಲ ಹಾಲಿ ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಚಿಂತಕರು, ಗಣ್ಯರು, ಸಮಾಜ ಸೇವಕರು, ಸಾಹಿತಿಗಳು ಸೇರಿದಂತೆ ಸಾವಿರಾರು ಜನರು ಪಾಲ್ಗೊಳ್ಳಲಿದ್ದಾರೆ. ತಪ್ಪದೇ ಸಮಾಜದ ಬಾಂಧವರು ಭೇದಗಳನ್ನು ಮರೆತು ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ದೇವರಾಜ್ ಆರ್ಯ, ಶಾಮು ಮಲ್ಕಾಪುರ, ಆನಂದ್ ಖಾಶೆಂಪೂರ್, ಯಲ್ಲೇಶ ಮಲ್ಕಾಪುರ, ಸಂತೋಷ ಕಾಂಬಳೆ, ಯಶಪಾಲ್ ಬೋರ್, ಕೃಷ್ಣ ನಾಟೇಕಾರ್, ಓಂಪ್ರಕಾಶ ಕಾಂಬಳೆ, ಸುಜೀತ ಬಡಿಗೇರ್, ರಮೇಶ ಅಂದಕುಲ್ ಮುಂತಾದವರು ಉಪಸ್ಥಿತರಿದ್ದರು.

# ಅನುದಾನಕ್ಕೆ ಆಗ್ರಹಿಸಿ ಮಾರ್ಚ್ 12ರಂದು ರಾಜ್ಯಾದ್ಯಂತ ಖಾಸಗಿ ಶಾಲಾ, ಕಾಲೇಜು ಬಂದ್ ಹೋರಾಟ

ಬೀದರ್,ಮಾ.-ಇದೇ ಮಾರ್ಚ್ 12ರಂದು ಬೆಳಿಗ್ಗೆ 11 ಗಂಟೆಗೆ ಬೀದರನಿಂದ ಚಾಮರಾಜನಗರವರೆಗೆ



ಕಲ್ಯಾಣ ಕರ್ನಾಟಕ ಅನುದಾನರಹಿತ ಖಾಸಗಿ ಶಾಲಾ ಕಾಲೇಜುಗಳ ಸಂಸ್ಥೆಯ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೃಹತ್ ಪ್ರತಿಭಟನೆ ಮಾಡಲಾಗುತ್ತಿದೆ. ಜಿಲ್ಲೆಯ ಖಾಸಗಿ ಶಾಲಾ ಕಾಲೇಜುಗಳ ಶಿಕ್ಷಕರು ಹಾಗೂ ಉಪನ್ಯಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಖಾಸಗಿ ಶಿಕ್ಷಣ ಸಂಸ್ಥೆಗಳ ರಾಜ್ಯಾಧ್ಯಕ್ಷ ರೇವಣಸಿದ್ದಪ್ಪ ಜಲಾದೆ ಅವರು ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 6ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಖಾಸಗಿ ಅನುದಾನರಹಿತ ಕನ್ನಡ ಶಾಲೆಗಳಿಗೆ ಅನುದಾನ ನೀಡುತ್ತಾರೆ ಎನ್ನುವ ಭರವಸೆ ಇತ್ತು. ಹಲವು ಬಾರಿ ಮುಖ್ಯಮಂತ್ರಿಗಳಿಗೂ, ಶಿಕ್ಷಣ ಮಂತ್ರಿಗಳಿಗೂ ಮನವಿ ಕೂಡಾ ಸಲ್ಲಿಸಲಾಗಿತ್ತು. ಆದರೆ ಕನ್ನಡ ಭಾಷೆ ಮತ್ತು ಕನ್ನಡ ಶಾಲೆಗಳನ್ನು ಉಳಿಸುವ ಕಾರ್ಯ ಮಾಡುತ್ತಿರುವ ಖಾಸಗಿ ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡದೆ ಕನ್ನಡ ವಿರೋಧಿ ಕಾರ್ಯ ಮಾಡುತ್ತಿರುವ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಹೋರಾಟ ಮಾಡಲಾಗುತ್ತಿದೆ ಎಂದರು.

ಸರ್ಕಾರಕ್ಕೆ ಕನ್ನಡ ಶಾಲೆ ಉಳಿಸುವ ಮನೋಭಾವ ಇಲ್ಲದಂತೆ ಕಾಣುತ್ತಿದೆ. ಪ್ರತೀ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದೊಂದು ಇಂಗ್ಲೀಷ ಮಾಧ್ಯಮದ 800 ಕರ್ನಾಟಕ ಪಬ್ಲಿಕ್ ಶಾಲೆ ಆರಂಭಿಸಲು ಘೋಷಣೆ ಮಾಡಿದೆ. ಇದರಿಂದ ಒಂದೊಂದು ಗ್ರಾಮಗಳಲ್ಲಿ ಮೂರರಿಂದ ನಾಲ್ಕು ಕನ್ನಡ ಶಾಲೆಗಳು ಬಂದ್ ಆಗುವ ನಿರೀಕ್ಷೆಯಿದೆ. ಆದ್ದರಿಂದ ಖಾಸಗಿ ಕನ್ನಡ ಶಾಲೆಗಳಿಗೆ ಈಗಲೂ ಅನುದಾನ ಒದಗಿಸಬೇಕೆಂದು ಅವರು ಕೋರಿದರು.

ಆರ್‌ಟಿಇ ಮರುಜಾರಿ ಮಾಡಬೇಕು. ಖಾಸಗಿ ಶಾಲೆಗಳಿಗೂ ಬಿಸಿಯೂಟ ವಿಸ್ತಿರಿಸಿ. ಖಾಲಿ ಇರುವ ಬೋಧಕರ ಹುದ್ದೆಗಳ ನೇಮಕಾತಿ ಮಾಡಬೇಕು. ಶಾಲೆಗಳ ನವೀಕರಣ ನೀತಿ ಸರಳಗೊಳಿಸಬೇಕು. ಜೂನ್ 1ಕ್ಕೆ ಮಕ್ಕಳಿಗೆ ಶಾಲೆಗೆ ಸೇರಿಸಲು ತಪ್ಪದೇ ಆರು ವರ್ಷ ತುಂಬಿರಬೇಕೆಂಬ ಸರ್ಕಾರದ ನೀತಿ ಬದಲಾಯಿಸಿ ಅನುಕೂಲ ಮಾಡಿಕೊಡಬೇಕೆಂಬ ಇತ್ಯಾದಿ ಬೇಡಿಕೆಗಳನ್ನು ಮಾ. 12 ರಂದು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಗುತ್ತಿದೆ ಎಂದು ಅವರು ತಿಳಿಸಿದರು.


ಕಲ್ಯಾಣ ಕರ್ನಾಟಕ ಅನುದಾನರಹಿತ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾಧ್ಯಕ್ಷ ರಾಜೇಂದ್ರ ಮಣಗೆರೆ ಅವರು ಮಾತನಾಡಿ, ಖಾಸಗಿ ಶಾಲೆಗಳ ಕಷ್ಟಕಾರ್ಪಣ್ಯಗಳ ಕುರಿತು ಸಾಕಷ್ಟು ಬಾರಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರ ಸಹಕಾರದಿಂದ ಮುಖ್ಯಮಂತ್ರಿಗಳಿಗೆ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದ ನಂತರವೂ ಸರ್ಕಾರ ನಮಗೆ ನಿರ್ಲಕ್ಷ್ಯ ತೋರಿದೆ. 2005ರ ವರೆಗೆ ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂಬ ಬೇಡಿಕೆಗೆ ಸ್ಪಂದನೆ ನೀಡದೆ, ಗಡಿಜಿಲ್ಲೆ ಬೀದರನಲ್ಲಿ ಅನ್ಯಭಾಷೆಗಳ ಪ್ರಭಾವದಿಂದ ಕನ್ನಡ ಶಾಲೆಗಳು ಮುಚ್ಚುತ್ತಿವೆ. ಅನುದಾನ ಇಲ್ಲದ ಕಾರಣ ಹಲವು ಕನ್ನಡ ಶಾಲೆಗಳು ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆಗಳಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರವೇ ಈ ರೀತಿ ನಿರ್ಲಕ್ಷ್ಯ ಧೋರಣೆ ತಾಳಿದರೆ ಹೇಗೆ? ಎಂದು ಪ್ರಶ್ನಿಸಿದರಲ್ಲದೆ ಕನ್ನಡ ಮುಗಿಸಲು ಕೆಪಿಎಸ್ ಶಾಲೆಗಳನ್ನು ತೆ-ರೆಯುತ್ತಿದೆ. ಮಾರ್ಚ್ 12ರ ಒಳಗಾಗಿ ಸರ್ಕಾರ ಒಂದು ನಿರ್ಧಾರಕ್ಕೆ ಬರಬೇಕು. ಇಲ್ಲವಾದರೆ ಅಂದು ಮಡಿವಾಳ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಬೃಹತ್ ಹೋರಾಟ ಮಾಡಲಾಗುವುದು ಎಂದು ಅವರು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಗಣಪತಿ ಸೋಲಪುರ, ಗುಂಡಯ್ಯ ತೀರ್ಥ, ದೇವಿದಾಸ, ಸಂದೀಪ ಶೆಟಕಾರ್, ವಿಜಯಕುಮಾರ್ ಗಡಿಭಾಗದ ಕನ್ನಡ ಶಾಲೆಗಳ ವಿನಾಶಕ್ಕೆ ಸರ್ಕಾರ ನಾಂದಿ ಹಾಡಿದಂತಿದೆ ಎಂದರು. ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ದೇವರ ಹೆಸರಲ್ಲಿ ಸಮಾಜ ಒಡೆಯಬೇಡಿ: ಚಿನ್ಮಯಗಿರಿ ಶ್ರೀಗಳ ಹಿತೋಪದೇಶ

ಕಲಬುರ್ಗಿ,ಮಾ.9-ದೇವರನ್ನು ಜಾತಿ-ಧರ್ಮದ ಬೇಲಿಯೊಳಗೆ ಬಂಧಿಸಬೇಡಿ ಮತ್ತು ಅವನ ಹೆಸರಿನಲ್ಲಿ ಸಮಾಜವನ್ನು ಒಡೆಯಬೇಡಿ ಎಂದು ಚಿನ್ಮಯಗಿರಿಯ ಶ್ರೀ ಗುರು ಮಹಾಂತೇಶ್ವರ ಮಠದ ಒಡೆಯ ವೀರಮಹಾಂತೇಶ್ವರ ಶಿವಾಚಾರ್ಯರು ಹೇಳಿದರು.

ತಾಲ್ಲೂಕಿನ ಸುಕ್ಷೇತ್ರ ಕಡಣಿಯಲ್ಲಿ ಶ್ರೀ ಶಂಕರಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಹಮ್ಮಿಕೊಂಡ ಲಚ್ಚಾಣದ ಶ್ರೀ ಸಿದ್ಧಲಿಂಗ ಮಹಾರಾಜ್‌ರ ಪುರಾಣ ಕಾರ್ಯಕ್ರಮದ ಮೊದಲ ದಿನದಂದು ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಮನುಷ್ಯ ಮತ್ತು ದೇವರ ನಡುವಿನ ಸಂಬಂಧ, ಜಾತಿ, ಧರ್ಮಗಳ ಜೊತೆ ಹೋಲಿಕೆ ಮಾಡುವುದು ಸಲ್ಲದು ಎಂದಿರುವ ಅವರು, ಜಾತಿವಾದಿಗಳ ವಿಚಾರಗಳಿಗೆ ಮರಳಾಗಬೇಡಿ ಎಂದು ಸಲಹೆ ನೀಡಿದರು.

ನಿಮ್ಮ ಮಕ್ಕಳನ್ನು ಪುಸ್ತಕದ ಹುಳುಗಳನ್ನಾಗಿ ಮಾಡಬೇಡಿ. ವಿಜ್ಞಾನದಷ್ಟೇ ಅಧ್ಯಾತ್ಮ ಬದುಕಿಗೆ ಅವಶ್ಯವಾಗಿದೆ. ಇಷ್ಟಲಿಂಗ ಪೂಜೆ, ಅಷ್ಟಾವರಣಗಳಲ್ಲಿ ವಿಜ್ಞಾನ ಅಡಗಿದೆ. ಬಸವಣ್ಣನವರ ಸಪ್ತ ಸೂತ್ರಗಳು



ಅಂತರಂಗದ ಶುದ್ಧಿ ಮಾಡುತ್ತವೆ. ಉನ್ನತ ಶಿಕ್ಷಣ ನೀಡುವುದು ಎಷ್ಟು ಮುಖ್ಯವೋ, ಅಷ್ಟೇ ಎಳೆತನದಲ್ಲಿ ಸಂಸ್ಕಾರ, ಸಂಸ್ಕೃತಿ ನೀಡುವುದು ಮುಖ್ಯವಾಗಿದೆ. ಸಂಸ್ಕಾರಧಾರಿ 'ಯೆರೆಯಬೇಕಾದರೆ, ಪುರಾಣ ಕಾರ್ಯಕ್ರಮಗಳಿಗೆ ಮಕ್ಕಳನ್ನು ಕರೆ ತನ್ನಿ ಎಂದು ಅವರು ಕರೆ ಕೊಟ್ಟರು.

ಜನ್ಮಧಾತರಿಗೆ ಚೆನ್ನಾಗಿ ನೋಡಿಕೊಳ್ಳುವವರು ಹೆಚ್ಚಾಗಿ ರೈತರು. ಉನ್ನತ ಶಿಕ್ಷಣ ಪಡೆದು, ದೊಡ್ಡ ಹುದ್ದೆಯಲ್ಲಿರುವವರು ಹೆತ್ತವರನ್ನು ವೃದ್ಧಾಶ್ರಮಕ್ಕೆ ತಳ್ಳುತ್ತಿದ್ದಾರೆ. ಈ ವ್ಯವಸ್ಥೆಗೆ ಪುರಾಣ ಪ್ರವಚನದಂತಹ ಧಾರ್ಮಿಕ ಕಾರ್ಯಕ್ರಮಗಳಿಂದ ಯುವಜನಾಂಗ ವಿಮುಖರಾಗುತ್ತಿರುವುದೇ ಕಾರಣ ಎಂದು ಅವರು ವಿವರಿಸಿದರು.

ಪುರಾಣ ಕಾರ್ಯಕ್ರಮವನ್ನು ದಕ್ಷಿಣ ವಿಧಾನಸಭಾ ಮತಕ್ಷೇತ್ರ ಶಾಸಕ ಅಲ್ಲಮ್‌ಪ್ರಭು ಪಾಟೀಲ್ ಅವರ ಪುತ್ರ, ಕಾಂಗ್ರೆಸ್ ಯುವ ಮುಖಂಡ ಶರಣಗೌಡ ಪಾಟೀಲ್ ಅವರು ಜ್ಯೋತಿ ಬೆಳಗುವ ಮೂಲಕ ಚಾಲನೆ ಮಾಡಿದರು. ವೇದಿಕೆ ಮೇಲೆ ಜೋಗೂರಿನ ಗುರುಲಿಂಗಯ್ಯಸ್ವಾಮಿ ಗಣಾಚಾರಿ, ಕಡಣಿ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಮಲ್ಲೇಶಪ್ಪ ಇಸರಿ, ನಿರ್ದೇಶಕರುಗಳಾದ ಭೀಮಶಾ ಪಾಟೀಲ್, ಗುಂಡೇರಾಯ ಈಶ್ವರಪ್ಪ ಕರಿಕಲ್, ಅಶೋಕ ಹದರಿ, ಶ್ಯಾಮರಾವ್ ಸೋನಾರ, ರಾಜಶೇಖರ ಕಡ್ಲಾ, ತೇಜಿರಾಯ ಆಲಗೂಢ, ಸೇರಿದಂತೆ ಅನೇಕರು ಅತಿಥಿಗಳಾಗಿ ಆಗಮಿಸಿದರು.

ನ್ಯಾಯವಾದಿ ದೇವೇಂದ್ರ ಎಕಲೂರ್ ಅವರು ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ಖ್ಯಾತ ಗವಾಯಿಗಳಾದ ಸಂತೋಷ ಹರಸೂರಮಠ ಅವರ ಸಂಗೀತ ಕಾರ್ಯಕ್ರಮಕ್ಕೆ ಸುರೇಶ ಆಳಂದ ತಬಲಾ ಸಾಥ್ ನೀಡಿದರು. ಚನ್ನಬಸಪ್ಪ ದ್ಯಾವಪಗೋಳ ಪುರಾಣಕ್ಕೆ ಬಸವಣ್ಣನಾಗಿ ಉಪಸ್ಥಿತರಿದ್ದರು.

# ಮಹಿಳೆಗೆ ಅಸಾಧ್ಯ ಯಾವುದೂ ಇಲ್ಲ: ಡಾ. ರೇಣುಕಾಸ್ವಾಮಿ

ಬೀದರ್, ಮಾ.- ಮನಸ್ಸು ಮಾಡಿದರೆ ಮಹಿಳೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂದು ಸಾಹಿತಿ ಡಾ. ರೇಣುಕಾ ಎಂ. ಸ್ವಾಮಿ ಅವರು ಹೇಳಿದರು.




ಅಕ್ಕಮಹಾದೇವಿ ಮಹಿಳಾ ಸಂಘದ ವತಿಯಿಂದ ನಗರದ ಅಲ್ಲಮಪ್ರಭು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯ ಸಾಮರ್ಥ್ಯಕ್ಕೆ ಸಾಟಿ ಇಲ್ಲ. ಆಕೆ ಉತ್ತುಂಗದ ಸಾಧನೆ ಮಾಡಬಹುದು. ತನ್ನ ಮಕ್ಕಳನ್ನು ದೇಶದ ಅತ್ಯುನ್ನತ ಸ್ಥಾನಕ್ಕೂ ಏರಿಸಬಹುದು ಎಂದರು.

ಪ್ರೀತಿ, ವಿಶ್ವಾಸ, ತಾಳ್ಮೆ ಹಾಗೂ ಹೊಂದಾಣಿಕೆ ಸುಖಿ ಕುಟುಂಬದ ಸೂತ್ರಗಳಾಗಿವೆ ಎಂದು ಹೇಳಿದರು.

ಡಾ. ಶೈಲಜಾ ಮಾತನಾಡಿ, ಇಡೀ ಕುಟುಂಬದ ಜವಾಬ್ದಾರಿ ಹೊತ್ತುಕೊಳ್ಳುವ ಮಹಿಳೆಯರು ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು ಎಂದು ವರು ಸಲಹೆ ಮಾಡಿದರು. ಬೀದರ್ ಅಕ್ಕಪಡೆಯ ಮುಖ್ಯಸ್ಥೆ ಸಂಗೀತಾ ಅವರು ಮಾತನಾಡಿ, ಮಹಿಳೆಯರು ಏನೇ ಸಮಸ್ಯೆಗಳಿದ್ದರೂ ಅಕ್ಕ ಪಡೆಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಶಿಕ್ಷಕಿ ಈಸ್ವರಮ್ಮ ಪಾಟೀಲ್ ಅವರು ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸತ್ಕರಿಸಿ, ಪ್ರೋತ್ಸಾಹಿಸಲಾಯಿತು.

ಚಂದ್ರಕಲಾ ಪಾಟೀಲ್ ಅವರು ಅಧ್ಯಕ್ಷತೆ ವಹಿಸಿದ್ದರು. ಎಚ್. ಆರ್. ಮಲ್ಲಮ್ಮ, ಸಂಘದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಸುಧಾರಾಣಿ ಬಿರಾದಾರ್ ಅವರು ನಿರೂಪಿಸಿದರು. ವೈಷ್ಣವಿ ಬಿರಾದಾರ್ ಅವರು ಸ್ವಾಗತಿಸಿದರು. ಆರಾಧ್ಯ ಪಾಟೀಲ್ ಅವರು ವಂದಿಸಿದರು.

# ಕಲಾವಿದ ಮುನೋಳಿಯವರಿಗೆ ನುಡಿನಮನ ಕರ್ನಾಟಕ ಆಧುನಿಕ ಕಲೆಯ ಬೆಳವಣಿಗೆಗೆ ಉತ್ತೇಜನ: ಡಾ. ಖಂಡೇರಾವ್

ಕಲಬುರ್ಗಿ, ಮಾ.- ನಾಡಿನ ಹಿರಿಯ ಚಿತ್ರಕಲಾವಿದ ಶಿವ ಎಸ್. ಮುನೋಳಿ ಅವರು ಕರ್ನಾಟಕದಲ್ಲಿ ಆಧುನಿಕ ಕಲೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸಿ, ಉತ್ತೇಜನ ನೀಡಿದ ಪ್ರಮುಖ ಕಲಾವಿದರಲ್ಲಿ ಒಬ್ಬರಾಗಿದ್ದರು ಎಂದು ನಾಡೋಜ ಡಾ. ಜೆ.ಎಸ್. ಖಂಡೇರಾವ್ ಅವರು ಹೇಳಿದರು.

ನಗರದ ಬಿಸಿಲು ಆರ್ಟ್ ಗ್ಯಾಲರಿ ಮತ್ತು ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಬಿಸಿಲು ಆರ್ಟ್ ಗ್ಯಾಲರಿಯಲ್ಲಿ ಹಮ್ಮಿಕೊಂಡ ನಮ್ಮನ್ನಗಲಿದ ಹಿರಿಯ ಚಿತ್ರಕಲಾವಿದ ಶಿವ ಎಸ್. ಮುನೋಳಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲೆಯಲ್ಲಿ ಏನಾದರೂ ಹೊಸತನವನ್ನು ಸೃಷ್ಟಿಸಬೇಕೆಂಬ ಹುಮ್ಮಸ್ಸಿನ ಮತ್ತು ಪ್ರಾಮಾಣಿಕ ಕಲಾವಿದರಾಗಿದ್ದರು. ಕರ್ನಾಟಕದ ದೃಶ್ಯಕಲಾ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದ 'ನಾವು ನಾಲ್ವರು' ಕಲಾ ಪ್ರದರ್ಶನದ ಸಂಸ್ಥಾಪಕ ಸದಸ್ಯರಾಗಿದ್ದರು ಎಂದರು. ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಿಂದ ಲಲಿತಕಲೆಯಲ್ಲಿ ಪದವಿ ಪಡೆದಿದ್ದ ಇವರು ನಿಸರ್ಗ ಚಿತ್ರ ಸ್ಟಿಲ್‌ಲೈಫ್, ಅಮೂರ್ತ ಚಿತ್ರ ಮತ್ತು ಮುದ್ರಣ ಕಲೆಯಲ್ಲಿ ಸಿದ್ಧಹಸ್ತರಾಗಿದ್ದರು. ಇವರು ಸಾವಿರಾರು ರೇಖಾಚಿತ್ರಗಳನ್ನು ರಚಿಸಿ ಜನಮನ್ನಣೆ ಪಡೆದಿದ್ದರು. ಎಸ್.ಎಸ್. ಮುನೋಳಿ ಅವರ ಅಗಲಿಕೆ ನಾಡಿನ ದೃಶ್ಯಕಲಾ ಕ್ಷೇತ್ರಕ್ಕೆ ತುಂಬಲಾರದ ಹಾನಿಯಾಗಿದೆ. ಮುನೋಳಿ ಅವರ ಕಲಾಕೃತಿಗಳು ಯುವ ಕಲಾವಿದರಿಗೆ ಇಂದಿಗೂ ಅಧ್ಯಯನ ಯೋಗ್ಯವಾಗಿವೆ ಎಂದು ಅವರು ವಿವರಿಸಿದರು.

ಚಿತ್ರಕಲಾವಿದರಾದ ಬಸವರಾಜ್ ಎಲ್. ಜಾನೆ, ನಾರಾಯಣ ಬೋಸಾವಳೆ, ಬಾಬುರಾವ್ ಎಚ್. ಅಂಬಾರಾಯ ಚಿನಮಳ್ಳಿ, ಸಂಗಯ್ಯ ಹಳ್ಳದಮಠ, ಡಾ. ಮಲ್ಲಿಕಾರ್ಜುನ್ ಬಾಗೋಡಿ, ಸಿದ್ದು ಮರಗೋಳ, ರಘುಪಾಲ್ ರೆಡ್ಡಿ, ಧನಂಜಯ ಕಾನಿಹಾಳ್, ಸಂಜಯ ಕಾನಿಹಾಳ್, ಮಲ್ಲಿಕಾರ್ಜುನ್ ಕೊರಳ್ಳಿ, ರಾಮಗಿರಿ ಪೋಲೀಸ್ ಪಾಟೀಲ್, ಸೂರ್ಯಕಾಂತ ನಂದೂರ್, ಗಿರೀಶ್ ಕುಲಕರ್ಣಿ, ಗೌರಿಶಂಕರ ಅಂದಾನಿ, ರಾಮಕೃಷ್ಣ ಕುಲಕರ್ಣಿ, ಕುಪೇಂದ್ರ, ಅಭಿಜಿತ ಎಸ್.ಕೆ. ಸೇರಿದಂತೆ ಅನೇಕ ಹಿರಿಯ-ಕಿರಿಯ ಕಲಾವಿದರು ಆಗಮಿಸಿ ಮುನೋಳಿ ಅವರಿಗೆ ನುಡಿನಮನ ಸಲ್ಲಿಸಿದರು. ಬಿಸಿಲು ಆರ್ಟ್ ಗ್ಯಾಲರಿ ಮುಖ್ಯಸ್ಥ ವಿ.ಬಿ. ಬಿರಾದಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಡಾ. ಪರಶುರಾಮ್ ಪಿ., ಅವರು ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

# ಹೊಂದನೂರು ಕೆಪಿಎಸ್ ಮ್ಯಾಗ್ನೆಟ್ ಶಾಲಾ ವಿಲೀನಕ್ಕೆ ಎಐಡಿಎಸ್‌ಓ ವಿರೋಧ

ಕಲಬುರ್ಗಿ, ಮಾ.10– ಹೊಂಗನೂರು ಕೆಪಿಎಸ್ ಮ್ಯಾಗ್ನೆಟ್ ಶಾಲಾ ವಿಲೀನ: ಸರ್ಕಾರದ ಸರ್ವಾಧಿಕಾರಿ ಧೋರಣೆ ಮತ್ತು ಪೋಷಕರ



ಇಚ್ಚೆಗೆ ವಿರುದ್ಧವಾದ ಮಾರ್ಚ್ 9 ಮತ್ತು 7 ರ ಆದೇಶವನ್ನು ಖಂಡಿಸುವುದಾಗಿ ಆಲ್ ಇಂಡಿ-ಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ದೇವದುರ್ಗ ಅವರು ತಿಳಿಸಿದ್ದಾರೆ.

ಹೊಂಗನೂರು ಕೆಪಿಎಸ್ ಮ್ಯಾಗ್ನೆಟ್ ಶಾಲಾ ಯೋಜನೆಯ ಹೆಸರಿನಲ್ಲಿ ಸುತ್ತಮುತ್ತಲಿನ ಏಳು ಸರ್ಕಾರಿ ಶಾಲೆಗಳನ್ನು ಬಲವಂತವಾಗಿ ವಿಲೀನಗೊಳಿಸಲು ಮಾರ್ಚ್ 9 ಮತ್ತು 7ರಂದು ಆದೇಶ ಹೊರಡಿಸಿರುವ ರಾಜ್ಯ ಸರ್ಕಾರದ ಕ್ರಮವು ಅತ್ಯಂತ ಅಪ್ರಜಾತಾಂತ್ರಿಕ ಮತ್ತು ಬಡವರ ಶಿಕ್ಷಣ ವಿರೋಧಿ ನೀತಿಯಾಗಿದೆ ಎಂದು ಅವರು ಹೇಳಿಕೆಯಲ್ಲಿ ದೂರಿದ್ದಾರೆ.

ಹೂಡಿಕೆ ಹೊಸಹಳ್ಳಿ, ಕನ್ನೀದೊಡ್ಡಿ, ಅಮ್ಮಳ್ಳಿ ದೊಡ್ಡಿ, ಸಂತೆ ಮೊಗೇನ ಹಳ್ಳಿ ಮತ್ತು ಸುಣ್ಣ ಘಟ್ಟ ಸೇರಿದಂತೆ ಈ ಭಾಗದ ಹಳ್ಳಿ ಶಾಲೆಗಳನ್ನು ಮುಚ್ಚುವುದನ್ನು ವಿರೋಧಿಸಿ ಪೋಷಕರು ಮತ್ತು ಸ್ಥಳೀಯ ಸಾರ್ವಜನಿಕರು ಈಗಾಗಲೇ ಪ್ರಬಲ ಹೋರಾಟವನ್ನು ನಡೆಸುತ್ತಿದ್ದಾರೆ. ತಮ್ಮ ಮಕ್ಕಳಿಗೆ ಹತ್ತಿರದ ಶಾಲೆಗಳಲ್ಲೇ ಶಿಕ್ಷಣ ಮುಂದುವರೆಯಬೇಕು ಮತ್ತು ಶಿಕ್ಷಕರ ಸ್ಥಳಾಂತರವಾಗಬಾರದು ಎಂಬ ಪೋಷಕರ ನ್ಯಾಯಯುತವಾದ ಬೇಡಿಕೆಗೆ ಸ್ಪಂದಿಸುವ ಬದಲು, ಸರ್ಕಾರವು ಈಗ ಮತ್ತೊಂದು ಕಟ್ಟುನಿಟ್ಟಿನ ಆದೇಶ ಹೊರಡಿಸುವ ಮೂಲಕ ಜನರ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಇಲಾಖೆಯು ಇತ್ತೀಚೆಗೆ ಹೊರಡಿಸಿರುವ ಆದೇಶದಲ್ಲಿ, ಈ ಶಾಲೆಗಳನ್ನು ಕೂಡಲೇ ವಿಲೀನಗೊಳಿಸಬೇಕೆಂದು ಒತ್ತಾಯಿಸಿರುವುದು ಮತ್ತು ಪೋಷಕರಿಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾಗಿದ್ದಾರೆ ಎಂಬ ನೆಪವೊಡ್ಡಿ ಸ್ಥಳೀಯ ಶಿಕ್ಷಕರು ಹಾಗೂ ಅಧಿಕಾರಿಗಳನ್ನು ಟೀಕಿಸಿರುವುದು ಸರ್ಕಾರದ ಹಠಮಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಸರ್ಕಾರವು ಒಂದೆಡೆ "ನಾವು ಯಾರನ್ನೂ ಬಲವಂತ ಮಾಡುವುದಿಲ್ಲ" ಎಂದು ಮಾತಿನ ಭರವಸೆಗಳನ್ನು ನೀಡುತ್ತಿರುವಾಗಲೇ, ಮತ್ತೊಂದೆಡೆ ಪೋಷಕರ ಇಚ್ಚೆಗೆ ವಿರುದ್ಧವಾಗಿ ಮಕ್ಕಳನ್ನು ಒತ್ತಾಯಪೂರ್ವಕವಾಗಿ ಸ್ಥಳಾಂತರಿಸಲು ಆದೇಶ ನೀಡುತ್ತಿರುವುದು ದ್ವಂದ್ವ ನೀತಿಯಾಗಿದೆ. ಗ್ರಾಮದ ಶಾಲೆಗಳು ಕೇವಲ ಕಟ್ಟಡಗಳಲ್ಲ, ಅವು ಆ ಭಾಗದ ಬಡ ಮಕ್ಕಳ ಶಿಕ್ಷಣದ ಆಸರೆ. ಇಂತಹ ಶಾಲೆಗಳಿಗೆ ಬೀಗ ಜಡಿಯುವ ಮೂಲಕ ಗ್ರಾಮೀಣ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿರುವ ಶಿಕ್ಷಣ ಇಲಾಖೆಯ ಕ್ರಮವು ಖಂಡನೀಯ ಎಂದು ಅವರು ಆಕ್ಷೇಪಿಸಿದ್ದಾರೆ.

ಪೋಷಕರು ತಮ್ಮ ಮಕ್ಕಳನ್ನು ಹೊಂಗನೂರು ಕೆಪಿಎಸ್ ಶಾಲೆಗೆ ಕಳುಹಿಸಲು ಸಿದ್ಧರಿಲ್ಲದಿದ್ದರೂ, ಅವರ ಮೇಲೆ ಒತ್ತಡ ಹೇರುವುದು ಸಂವಿಧಾನ ಬದ್ಧವಾದ ಶಿಕ್ಷಣದ ಹಕ್ಕಿನ ಉಲ್ಲಂಘನೆಯಾಗಿದೆ. ಈ ಸರ್ವಾಧಿಕಾರಿ ಆದೇಶವನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಸರ್ಕಾರವು ಕೂಡಲೇ ಈ ವಿಲೀನ ಪ್ರಕ್ರಿಯೆಯನ್ನು ಕೈಬಿಟ್ಟು, ಹಳ್ಳಿ ಶಾಲೆಗಳಲ್ಲಿಯೇ ಗುಣಮಟ್ಟದ ಶಿಕ್ಷಣ ನೀಡಲು ಕ್ರಮ ವಹಿಸಬೇಕು. ಜನರ ಪ್ರತಿರೋಧವನ್ನು ಅಲಕ್ಷಿಸಿ ಮುಂದುವರಿದಲ್ಲಿ, ಮುಂಬರುವ ದಿನಗಳಲ್ಲಿ ಈ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

# ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಅಗತ್ಯ: ಹಾವಲಿಂಗೇಶ್ವರ ಶ್ರೀಗಳು

ಬೀದರ್, ಮಾ.10– ಪ್ರಸ್ತುತ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಕೊಡುವುದು ಅಗತ್ಯವಾಗಿದೆ ಎಂದು ಹಲಬರ್ಗಾದ ರಾಚೋಟೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರು



ಹೇಳಿದರು.

ಭಾಲ್ಕಿ ತಾಲ್ಲೂಕಿನ ಹಲಬರ್ಗಾ ಗ್ರಾಮದಲ್ಲಿ ಜರುಗಿದ ಬಸವ ಚೇತನ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಬೌದ್ಧಿಕ ಬೆಳವಣಿಗೆ ಜತೆಗೆ ಅವರಿಗೆ ನೈತಿಕ ಹಾಗೂ ಮಾನವೀಯ ಮೌಲ್ಯಗಳನ್ನು ಕಲಿಸಬೇಕಿದೆ. ಆ ಮೂಲಕ ಸುಸಂಸ್ಕೃತ ಸಮಾಜ ನಿರ್ಮಿಸಬೇಕಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಅನುದಾನಿತ ಪದವಿಪೂರ್ವ ಕಾಲೇಜು ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಡಾ. ವಿಜಯಕುಮಾರ ಪಾಟೀಲ ಮಾತನಾಡಿ, ಬಸವ ಚೇತನ ಪಬ್ಲಿಕ್ ಶಾಲೆ ಗ್ರಾಮೀಣ ಪ್ರದೇಶದಲ್ಲಿ ಸಂಸ್ಕಾರಯುತವಾದ ಸ್ಪರ್ಧಾತ್ಮಕ ಶಿಕ್ಷಣ ಕೊಡುತ್ತಿದೆ. ಉತ್ತಮ ನಾಗರಿಕರನ್ನು ನಿರ್ಮಿಸಲು ಕೊಡುಗೆ ನೀಡುತ್ತಿದೆ ಎಂದು ಅವರು ಹೇಳಿದರು. ಎನ್‌ಎಸ್‌ಎಸ್‌ಕೆ ನಿರ್ದೇಶಕ ವೀರಶೆಟ್ಟಿ ಪಟ್ನೆ ಮಾತನಾಡಿದರು. ಶಾಲೆಯ ಅಧ್ಯಕ್ಷ ಗುಂಡಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಚನ್ನಯ್ಯ ಸ್ವಾಮಿ, ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ, ಪತ್ರಕರ್ತ ನಾಗೇಶ ಪ್ರಭಾ, ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶಿವಕುಮಾರ ಪಾಟೀಲ್ ತೇಗಂಪುರ, ನಮ್ಮ ಕರ್ನಾಟಕ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ್ ಜ್ಯಾಂತಿ, ಸಿಆರ್‌ಪಿ ಭುವನೇಶ್ವರ ಬಿರಾದಾರ್, ಪಿಡಿಒ ಚಂದ್ರಕಾಂತ ಫುಲೆ, ನಿರಂತರ ಫೌಂಡೇಷನ್ ಸದಸ್ಯೆ ಡಾ. ಲಕ್ಷ್ಮಿ ಮುಗಳಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮಂಜುನಾಥ ಪಾಟೀಲ್, ಪ್ರಾಚಾರ್ಯೆ ಚೈತನ್ಯ, ಸ್ವಾಮಿ ಸಮರ್ಥ್ ಇವೆಂಟ್ಸ್‌ನ ಮಾಲೀಕ ಅವಿನಾಶ್ ಸ್ವಾಮಿ, ಶಾಲೆಯ ಆಡಳಿತಾಧಿಕಾರಿ ಪವನ್ ಪನಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ಮಕ್ಕಳಿಂದ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಮನ ರಂಜಿಸಿದವು.

# ಬಾಳಿಯಲ್ಲಿ ಮಾರ್ಚ್ 19ರಂದು ಭವ್ಯ ರಥೋತ್ಸವ: ಕೊಪ್ಪಳ ಶ್ರೀಗಳಿಂದ ಆಧ್ಯಾತ್ಮ ಪ್ರವಚನ

ಕಲಬುರ್ಗಿ, ಮಾ.10– ಜಿಲ್ಲೆಯ ಆಳಂದ ತಾಲ್ಲೂಕಿನ ಬಾಳಿ ಗ್ರಾಮದಲ್ಲಿ ಇದೇ ದಿನಾಂಕ ಮಾರ್ಚ್ 12ರಿಂದ 17ರವರೆಗೆ ಅಧ್ಯಾತ್ಮ ಪ್ರವಚನ ನಡೆಯಲಿದೆ. ಕೊಪ್ಪಳದ ಜಗದ್ಗುರು ಗವಿಸಿದ್ದೇಶ್ವರ ಮಹಾಸ್ವಾಮಿಗಳು ಗವಿಮಠ ಅವರಿಂದ ಪ್ರತಿದಿನ ಸಾಯಂಕಾಲ 6:30ರಿಂದ 7.30ವರೆಗೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ರಥೋತ್ಸವ ಮೈದಾನದಲ್ಲಿ ಜರುಗಲಿದೆ ಎಂದು ಜಾತ್ರಾ ಸಮಿತಿಯ ಸಂಚಾಲಕ ಶಂಕರ್ ಉಜಳಂಬೆ ಅವರು ತಿಳಿಸಿದ್ದಾರೆ.

ಅಧ್ಯಾತ್ಮ ಪ್ರವಚನದಲ್ಲಿ ಪಾಲ್ಗೊಳ್ಳಬೇಕಾಗಿ. ಶ್ರೀ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ ಕಮಿಟಿಯು ವಿನಂತಿಸುತ್ತದೆ. ಈ ಆಧ್ಯಾತ್ಮಿಕ ಜ್ಞಾನ ಸಿಂಚನ ಕಾರ್ಯಕ್ರಮದಲ್ಲಿ ಸುಮಾರು 20 ಸಾವಿರ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಶಹಾಬಾಜರ್ ನಾಕಾ ದಿಂದ ಮದ್ಯಾಹ್ನ 4:30ಕ್ಕೆ ಸಾರಿಗೆ ವ್ಯವಸ್ಥೆ, ಆರೋಗ್ಯ ಸೇವೆ, ಬಹು ಶಿಸ್ತಿನಿಂದ ಮಾಡಲಾಗಿದೆ. ಪೂಜ್ಯರ ಅಮೃವಾಣಿ ಪ್ರತಿಯೊಬ್ಬ ಭಕ್ತರ ಬದುಕಿನಲ್ಲಿ ಸಂತೋಷ, ಸಂತೃಪ್ತಿ, ನೆಮ್ಮದಿ, ಸಾಮಜಿಕ ಸೇವಾ ಮನೋಭಾವನೆ ಪ್ರೇರಣಾದಾಯಕವಾಗಲಿದೆ ಎಂದು ಅವರು ಹೇಳಿಕೆಯಲ್ಲಿ ಆಶಿಸಿದ್ದಾರೆ.

ಮಾರ್ಚ್ 18ರಂದು ಬುಧವಾರ ಮುಂಜಾನೆ 9:00ಗಂಟೆಗೆ ಲಿಂಗದೀಕ್ಷೆ ಮತ್ತು ಅಯ್ಯಚಾರ, ರುದ್ರಾಕ್ಷಿ ಧಾರಣೆ ಹಾಗೂ ಉಡಿ ತುಂಬವ



ಕಾರ್ಯಕ್ರಮ ಹಾಗೂ ಸಾಯಂಕಾಲ ರಾತ್ರಿ ಶ್ರೀ ಮಲ್ಲಿಕಾರ್ಜುನ ಕರ್ತೃ ಗದ್ದಿಗೆಗೆ ರುದ್ರಾಭಿಷೇಕ. 19ರಂದು ಗುರುವಾರ ಬೆಳಿಗ್ಗೆ 8:00 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ಮಲ್ಲಿಕಾರ್ಜುನ ದೇವರ ಪಲ್ಲಕ್ಕಿ ಮಹೋತ್ಸವ ಹಾಗೂ ನಂದಿಕೋಲು ಮೆರವಣಿಗೆ ಹಾಗೂ ಸಾಯಂಕಾಲ 6:30 ಗಂಟೆಗೆ ಭವ್ಯ ರಥೋತ್ಸವ ಜರುಗುತ್ತದೆ. ರಾತ್ರಿ 8 ಗಂಟೆಗೆ ಧಾರ್ಮಿಕ ಸಭೆ ಕಾರ್ಯಕ್ರಮ ನಡೆಯುತ್ತದೆ. ಧಾರ್ಮಿಕ ಸಮ್ಮೇಳನದ ದಿವ್ಯ ನೇತೃತ್ವವನ್ನು ಕಾಯಕಯೋಗಿ ದಾಸೋಹ ಮೂರ್ತಿ, ಷಟಸ್ಥಲ ಬ್ರಹ್ಮ ಸಿದ್ಧರಾಮ ಶಿವಾಚಾರ್ಯರು ಚಿನ್ಮಯಗಿರಿ ಪೂಜ್ಯರು ವಹಿಸಿಕೊಳ್ಳುವರು. ನಾಡಿನ ಹರ ಗುರು ಚರಮೂರ್ತಿಗಳು ಆಶೀರ್ವಚನ ನೀಡುವರು ಎಂದು ಅವರು ತಿಳಿಸಿದ್ದಾರೆ.

ಮಾರ್ಚ್ 20ರಂದು ಶುಕ್ರವಾರ ಬೆಳಗ್ಗೆ 11 ಗಂಟೆಯಿಂದ ಬಜನಾ ಕಾರ್ಯಕ್ರಮ ಹಾಗೂ ಸಾಯಂಕಾಲ 4 ಗಂಟೆಯಿಂದ ಜಂಗಿ ಪೈಲ್ವಾನ್ ಕುಸ್ತಿಗಳು ನಡೆಯುತ್ತವೆ. ಪಂಚಪೀಠ ಹೊಂದಿರುವ ಶ್ರೀ ಮಲ್ಲಿಕಾರ್ಜುನ ದರ್ಶನವನ್ನು ಪಡೆದಿರುವ ಭಕ್ತರು ದೈವ ಭಕ್ತರಾಗಿ, ಶಕ್ತಿ ಸಂಪನ್ನರಾಗಿ, ಬುದ್ಧಿವಂತರಾಗಿ, ಧೈರ್ಯವಂತರು, ಸಾಮಾಜಿಕ ಅಭಿವೃದ್ಧಿಯ ಚಿಂತಕರಾಗಿ ಹೊರಹೊಮ್ಮುತ್ತಾರೆ. ಮಲ್ಲಿಕಾರ್ಜುನ ಎಂದರೆ ಶಿವ ಪಾರ್ವತಿಯ ತಾಣವಿರುವ ಸಂಕೇತ ಎಂದು ನಂಬಲಾಗಿದೆ. ಇಂತಹ ಒಂದು ದಿವ್ಯ ಸನ್ನಿಧಾನದ 68ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಕ್ಕೆ ಕಲ್ಯಾಣ ಕರ್ನಾಟಕ ನಾಡಿನ ಸಕಲ ಭಕ್ತಾದಿಗಳು ಬಂದು ಆಶೀರ್ವಾದವನ್ನು ಪಡೆಯಲು ಅವರು ಕೋರಿದ್ದಾರೆ.

# ಆರೋಗ್ಯ ಇಲಾಖೆ ಬೇಡಿಕೆ: ಇಂದು ಅನಿರ್ಧಿಷ್ಟಾವಧಿ ಮುಷ್ಕರ ಆರಂಭ



ಯಡ್ರಾಮಿ, ಮಾ.10– ಆರೋಯ ಇಲಾಖೆಯು ಬೇಡಿಕೆಗಳನ್ನು ಈಡೇರಿಸದೇ ಹೋದಲ್ಲಿ ಮಾರ್ಚ್ 11ರಿಂದ 15ರವರೆಗೆ ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದ ನೌಕರರು ಕಪ್ಪು ಪಟ್ಟಿ ಧರಿಸಿ ತುರ್ತು ಸೇವೆಗಳನ್ನು ಮಾತ್ರ ನೀಡುವ ಮೂಲಕ ಮುಷ್ಕರ ಆರಂಭಿಸಲಾಗುವುದು ಎಂದು ತಾಲ್ಲೂಕು ವೈದ್ಯಾಧಿಕಾರಿಗಳು ತಹಸಿಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ವೃಂದಗಳಲ್ಲಿ ರಾಜ್ಯಾದ್ಯಂತ 36,397 ಅಧಿಕಾರಿಗಳು ಹಾಗೂ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಸುಮಾರು 6 ಕೋಟಿ ಜನರಿಗೆ ಆರೋಗ್ಯ ಸೇವೆ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಆದರೆ ವಯೋ ನಿವೃತ್ತಿ ಹಾಗೂ ಇತರ ಕಾರಣಗಳಿಂದ ಸಿಬ್ಬಂದಿಗಳ ಸಂ-ಖ್ಯೆ ಕಡಿಮೆಯಾಗುತ್ತಿದ್ದು, ಖಾಲಿ ಹುದ್ದೆಗಳು ಭರ್ತಿಯಾಗದ ಕಾರಣ ಪ್ರಸ್ತುತ ಸೇವೆಯಲ್ಲಿರುವ ಸಿಬ್ಬಂದಿ ಮೇಲೆ ಹೆಚ್ಚಿನ ಕೆಲಸದ ಒತ್ತಡ ಉಂಟಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಆರೋಗ್ಯ ಇಲಾಖೆಯ ವಿವಿಧ ವೃಂದಗಳ ಕೇಂದ್ರ ಸಂಘಟನೆಗಳು ಹಲವು ಬಾರಿ ಸಚಿವರು ಮತ್ತು ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನೌಕರರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಿದರೂ ಕ್ರಮ ಕೈಗೊಳ್ಳಲಾಗಿಲ್ಲ. ಸಂಘದ ಪ್ರಮುಖ ಬೇಡಿಕೆಗಳಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಔಷಧಿಗಳನ್ನು ಸಮಯಕ್ಕೆ ಸರಿಯಾಗಿ ಸರಬರಾಜು ಮಾಡುವುದು ಪ್ರಮುಖವಾಗಿದೆ. ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಮೂಲಕ ಔಷಧಿ ಹಾಗೂ ವೈದ್ಯಕೀಯ ಸಾಮಗ್ರಿಗಳನ್ನು ಪೂರೈಸಬೇಕಾದರೂ ಇತ್ತೀಚಿನ ದಿನಗಳಲ್ಲಿ ಸರಬರಾಜಿನಲ್ಲಿ ತೆ-ಽಂದರೆ ಉಂಟಾಗಿದ್ದು, ಇದ-ರಿಂದ ರೋಗಿಗಳಿಗೆ ಸಮಯಕ್ಕೆ ಸರಿಯಾದ ಚಿಕಿತ್ಸೆ ನೀಡಲು ವೈದ್ಯರು ಹಾಗೂ ಸಿಬ್ಬಂದಿ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಡಾ. ಉಮೇಶ ಶರ್ಮಾ, ಡಾ. ವಿನೂತ ಕುಲಕರ್ಣಿ, ಶಂಕರಯ್ಯ ಹಿರೇಮಠ, ಡಾ. ರಾಜಕುಮಾರ್ ಅರಳಗುಂಡಗಿ, ಡಾ. ಸಂದೀಪ್ ಸಿಂಗ್ ಮಳ್ಳಿ, ಶ್ರೀಶೈಲ್ ಅರಳಗುಂಡಗಿ, ಶಿವುಕುಮಾರ್ ಡಂಬಳ, ಜಗದೀಶ ಜಲ್ಲದೆ, ಶಿವನಗೌಡ, ಅಂಬರೇಶ್, ಜಗದೀಶ್, ಶ್ರೀಶೈಲ್ ಹೊಸಮನಿ, ಈಶ್ವರಾಜು ಮತ್ತು ಸಮುದಾಯ, ಪ್ರಾಥಮಿಕ, ಆರೋಗ್ಯ ಕೇಂದ್ರ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಮಾಜದ ಅಭಿವೃದ್ಧಿಯಲ್ಲಿ ಮಹಿಳಯರ ಪಾತ್ರ ಪ್ರಮುಖ: ಪ್ರದೀಪ್ ಗುಂಟಿ

ಬೀದರ್, ಮಾ.10– ಮಹಿಳೆಯರು ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ ಎಂದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಹೇಳಿದರು.

ನಗರದ ನೆಹೆಮಿಯಾ ಶಾಲೆಯಲ್ಲಿ ವಾರ್ಷಿಕೋತ್ಸವ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಪತ್ನಿ ಶೈನಿ ಗುಂಟಿ ಅವರೊಂದಿಗೆ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರ ಸಬಲೀಕರಣ, ಶಿಕ್ಷಣದ ಮಹತ್ವ ಹಾಗೂ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳ ಅಗತ್ಯತೆ ಕುರಿತು ವಿವರಿಸಿ, ಮಹಿಳಾ ದಿನಾಚರಣೆಯನ್ನು ವಾರ್ಷಿಕೋತ್ಸವದೊಂದಿಗೆ ಆಚರಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮಹಿಳೆಯರ ಬಗ್ಗೆ ಗೌರವ, ಸಮಾನತೆ ಹಾಗೂ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವುದು ಕಾರ್ಯಕ್ರಮದ




ಮುಖ್ಯ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ನೃತ್ಯ, ಗೀತೆಗಳು, ನಾಟಕಗಳು ಹಾಗೂ ಸಂದೇಶಾತ್ಮಕ ಪ್ರದರ್ಶನಗಳ ಮೂಲಕ ಮಹಿಳಾ ಸಬಲೀಕರಣ, ಸಾಮಾಜಿಕ ಜಾಗೃತಿ ಹಾಗೂ ಶಿಕ್ಷಣದ ಮಹತ್ವವನ್ನು ಮನದಟ್ಟುಗೊಳಿಸಿದರು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಅತಿಥಿಗಳು ಮತ್ತು ಪೋಷಕರ ಮೆಚ್ಚುಗೆಗೆ ಪಾತ್ರವಾದವು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾಲೆಯ ಮಹಿಳಾ ಶಿಕ್ಷಕಿಯರನ್ನು ಗೌರವಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಅವರ ಸೇವೆಯನ್ನು ಶ್ಲಾಘಿಸಿ ಶಾಲೆಯ ಆಡಳಿತ ಮಂಡಳಿ ಹಾಗೂ ಅತಿಥಿಗಳು ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಂಸ್ಥಾಪಕಿ ಇಂದಿರಾ ನೆಹೆಮಿಯಾ, ಹಾಗೂ ಕಾರ್ಯದರ್ಶಿ ಮೈಕಲ್ ನೆಹೆಮಿಯಾ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದರು. ಇದೇ ಸಂದರ್ಭದಲ್ಲಿ ಮೈಕಲ್ ಮೆಡಂ, ಶ್ರದ್ಧಾ ಗುದಗೆ, ನವಾಜ್ ಖಾನ್, ಸಯ್ಯದ್ ಹಾಶ್ಮಿ, ಡಾ. ಅನುರಾಧಾ ಶಾ ಹಾಗೂ ಡಾ. ಪ್ರಾಚಿ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶಿಕ್ಷಕರು, ಪೋಷಕರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದು ವಿದ್ಯಾರ್ಥಿಗಳ ಪ್ರತಿಭೆಯನ್ನು ಮತ್ತು ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಶಾಲಾ ಆಡಳಿತ ಮಂಡಳಿಯ ಪ್ರಯತ್ನವನ್ನು ಮೆಚ್ಚಿದರು.

# ಬೀದರ್ ವಿಶ್ವವಿದ್ಯಾಲಯದ ಐದು ಪಠ್ಯಪುಸ್ತಕಗಳ ಲೋಕಾರ್ಪಣೆ

## ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕಲ್ಪವೃಕ್ಷ: ಕುಲಪತಿ ಪ್ರೊ. ಬಿರಾದಾರ್




ಬೀದರ್, ಮಾ.10– ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕಲ್ಪವೃಕ್ಷವಾಗಿ. ಯಾವುದೇ ಗೈಡ್‌ಗಳನ್ನು ಬಳಸದೆ ಪಠ್ಯಪುಸ್ತಕಗಳನ್ನೇ ಬಳಸಿಕೊಂಡು ಅಧ್ಯಯನ ಮಾಡಿದಾಗ ಉತ್ತಮ ಫಲಿತಾಂಶಗಳನ್ನು ನಿರೀಕ್ಷಿಸಲು ಸಾಧ್ಯ ಎಂದು ಬೀದರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಎಸ್. ಬಿರಾದಾರ್ ಅವರು ತಿಳಿಸಿದರು.

ಎ.ಎಸ್.ಆರ್ ಫಂಕ್ಷನ್ ಹಾಲ್‌ನಲ್ಲಿ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘದ ವತಿಯಿಂದ ಪ್ರಕಾಶನ ಮಾಡಲಾದ ಬೀದರ್ ವಿಶ್ವವಿದ್ಯಾಲಯದ ವಿವಿಧ ಪದವಿ ತರಗತಿಗಳ ಐದು ಪಠ್ಯಪುಸ್ತಕಗಳ ಲೋಕಾರ್ಪಣೆ ಹಾಗೂ ಐಎಎಸ್ ಪರೀಕ್ಷೆಯ ಸಂಪನ್ಮೂಲ ತಜ್ಞರಾದ ನಿಖಿಲ್ ಎನ್. ನಾವದಗೇರಿ ಅವರಿಂದ ಹಮ್ಮಿಕೊಂಡ ವಿಶೇಷೋಪನ್ಯಾಸ ಕಾರ್ಯಕ್ರಮದಲ್ಲಿ ಪಠ್ಯಪುಸ್ತಕಗಳ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪಠ್ಯಪುಸ್ತಕಗಳನ್ನು ತಜ್ಞರು ಸರಳವಾಗಿ ಮತ್ತು ಅರ್ಥಪೂರ್ಣವಾಗಿ ರಚಿಸಿದ್ದಾರೆ ಎಂದರು.

ಪ್ರೊ. ಜಗನ್ನಾಥ ಹೆಬ್ಬಾಳೆ, ಡಾ. ಶಿವಕುಮಾರ್ ನಾಗವಾರ್, ಡಾ. ಸುನಿತಾ ಕೂಡ್ಲಿಕರ್, ಡಾ. ಅಶೋಕ ಕೋರೆ, ಡಾ. ಎಂ.ಜಿ. ದೇಶಪಾಂಡೆ, ಡಾ. ಹೇಮಲತಾ ವಡ್ಡೆ ಅವರು ಅತ್ಯುತ್ತಮ ಗ್ರಂಥಗಳನ್ನು ವಿಶ್ವವಿದ್ಯಾಲಯಕ್ಕೆ ನೀಡಿದ್ದಾರೆ. ಅವುಗಳನ್ನು ಮಕ್ಕಳು ಅಧ್ಯಯನ ಮಾಡಬೇಕು. ಪ್ರಕಾಶನಗೈದ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು. ಅಲ್ಲದೇ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣ ಉಪಯೋಗಿಸಬಾರದೆಂದು ಆದೇಶ ಹೊರಡಿಸಿದ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಆದರೆ ಉಪಯುಕ್ತ ವೆಬ್‌ಸೈಟ್‌ಗಳನ್ನು ಸದುಪಯೋಗ ಪಡೆದುಕೊಂಡು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಎದುರಿಸಬೇಕೆಂದು ಅವರು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘದ ಅಧ್ಯಕ್ಷ ಪ್ರೊ. ಜಗನ್ನಾಥ ಹೆಬ್ಬಾಳೆ ಅವರು ಮಾತನಾಡಿ, ಆರ್.ವಿ. ಬಿಡಪ್, ಹಣದಿ, ಸರ್ವಜ್ಞನ ತ್ರಿಪದಿಗಳು, ಆಧುನಿಕ ಸಾಹಿತ್ಯ ಸಂಗ್ರಹ. ಕಲ್ಯಾಣ ಕರ್ನಾಟಕದ ಕಥೆಗಳು ಈ ಐದು ಕೃತಿಗಳನ್ನು ಬೀದರ ವಿ.ವಿ.ಯ ಪಠ್ಯಪುಸ್ತಕಗಳಾಗಿವೆ. ಇವು ಅತ್ಯಂತ ಮೌಲ್ಯಿಕ ಕೃತಿಗಳು. ಇವುಗಳನ್ನು ಅಧ್ಯಯನ ಮಾಡುವುದರ ಜೊತೆಗೆ ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಸದ್ಬಳಕೆ ಮಾಡಿಕೊಂಡು ಅದಕ್ಕೆ ತಕ್ಕಂತೆ ಪ್ರಯತ್ನ ಮಾಡಿ ಜೀವನದಲ್ಲಿ ಯಶಸ್ವಿಯಾಗಬೇಕು ಎಂದರು.

ಐಎಎಸ್ ಪರೀಕ್ಷೆಯ ಸಂಪನ್ಮೂಲ ತಜ್ಞ ನಿಖಿಲ್ ಎನ್. ನಾವದಗೇರಿ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶ್ರದ್ಧೆಯಿಂದ ಅಧ್ಯಯನ ಮಾಡಿ, ಅದಕ್ಕೆ ತಕ್ಕಂತೆ ಪರಿಶ್ರಮಪಟ್ಟು, ಆತ್ಮವಿಶ್ವಾಸದಿಂದ ಪರೀಕ್ಷೆಗಳನ್ನು ಬಿಡಿಸಿ ಗುರಿ ತಲುಪಬೇಕು. ಪಾಲಕರ ಶ್ರಮ ಕಡೆಗಣಿಸದೆ, ಗುರುವಿನ ಆಜ್ಞೆ ಮೀರದೆ, ಸಾಮಾಜಿಕ ಜಾಲತಾಣ ಹೆಚ್ಚು ಬಳಸದೆ ಗುರಿಗೆ ಬೆನ್ನತ್ತಿದಾಗ ಅಂದುಕೊಂಡ ಮಜಲು ತಲುಪಲು ಸಾಧ್ಯವಾಗುತ್ತದೆ ಎಂದರು.

ಇದೇ ವೇಳೆ ಬೀದರ ವಿ.ವಿ.ಯ ಐದು ಪಠ್ಯಪುಸ್ತಗಳ ಲೋಕಾರ್ಪಣೆ ಮಾಡಲಾಯಿತು. ವೇದಿಕೆ ಮೇಲೆ ನಟ ನಿರ್ದೇಶಕ ವಿಷ್ಣುಕಾಂತ ಬಿ.ಜೆ., ಹಿರಿಯ ಸಾಹಿತಿ ಡಾ. ಶಿವಕುಮಾರ್ ನಾಗವಾರ್, ಕನಕ ಪ್ರಶಸ್ತಿ ಪುರಸ್ಕೃತ ಡಾ. ರವೀಂದ್ರ ಲಂಜವಾಡಕರ್, ಡಾ. ಸಾವಿತ್ರಿಬಾಯಿ ಹೆಬ್ಬಾಳೆ, ಡಾ. ಅಶೋಕ ಕೋರೆ, ಮಹಾರುದ್ರ ಡಾಕುಳಗಿ ಉಪಸ್ಥಿತರಿದ್ದರು. ಎಸ್.ಬಿ. ಕುಚಬಾಳ್ ನಾಡಗೀತೆ ನಡೆಸಿಕೊಟ್ಟರು. ಡಾ. ಸುನಿತಾ ಕೂಡ್ಲಿಕರ್ ನಿರೂಪಿಸಿದರು. ಡಾ. ರಾಜಕುಮಾರ್ ಹೆಬ್ಬಾಳೆ ಸ್ವಾಗತಿಸಿದರು. ನಿಜಲಿಂಗಪ್ಪ ತಗಾರೆ ವಂದಿಸಿದರು. ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಂಗನವಾಡಿ ಆಹಾರ ಪೂರೈಕೆಯಲ್ಲಿ ಔರಾದ್ ಶಾಸಕರ ಭ್ರಷ್ಟಾಚಾರ: ತನಿಖೆಗೆ ಲೋಕಾಯುಕ್ತಕ್ಕೆ ಹೈಕೋರ್ಟ್ ಆದೇಶ

ಬೀದರ್, ಮಾ.10– ಅಂಗನವಾಡಿಗಳಿಗೆ ಆಹಾರ ಪೂರೈಸುವಲ್ಲಿ ಔರಾದ್ ಶಾಸಕ ಪ್ರಭು ಚವಾಣ್ ನಡೆಸಿದ್ದಾರೆ ಎನ್ನಲಾದ ಭ್ರಷ್ಟಾಚಾರ ಪ್ರಕರಣದ ಕುರಿತು ತನಿಖೆ ನಡೆಸುವಂತೆ ಕಲಬುರಗಿ ಹೈಕೋರ್ಟ್ ಪೀಠವು ಲೋಕಾಯುಕ್ತಕ್ಕೆ ಆದೇಶ ನೀಡಿದೆ.

ಔರಾದ್‌ನ ಮುಖಂಡ ದೀಪಕ್ ಪಾಟೀಲ್ ಚಾಂದೋರಿ ಅವರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ 200464–2026 ರ ವಿಚಾರಣೆ ನಡೆಸಿದ ನ್ಯಾಯಾಧೀಶ ಎಸ್. ವಿಶ್ವಜೀತ್ ಶೆಟ್ಟಿ ಅವರು ಮಾ. 5 ರಂದು ಈ ಕುರಿತು ಆದೇಶ ಹೊರಡಿಸಿದ್ದಾರೆ. ಭ್ರಷ್ಟಾಚಾರದ ದೂರಿನ ಸಂಬಂಧ ಒಂದು ತಿಂಗಳೊಳಗೆ ಕಾನೂನು ರೀತ್ಯ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ. ದೀಪಕ್ ಪಾಟೀಲ್ ಚಾಂದೋರಿ ಅವರ ಪರವಾಗಿ ವಕೀಲ ಸಿದ್ರಾಮೇಶ್ವರ ಪಾಟೀಲ ವಾದ ಮಂಡಿಸಿದ್ದರು.

ಔರಾದ್ ಕ್ಷೇತ್ರದ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಪೂರೈಸುವ ಟೆಂಡರ್ ಕೊಡಿಸಿದ್ದಕ್ಕೆ ಪ್ರತಿಯಾಗಿ ಔರಾದ್ ಶಾಸಕರು ಸುಂದ್ರಮ್ಮ ಟ್ರೇಡಿಂಗ್ ಕಂಪನಿಯಿಂದ ರೂ. 1 ಕೋಟಿ ಲಂಚ ಪಡೆದಿದ್ದಾರೆ. ಹೀಗಾಗಿ ಪ್ರಕರಣದ ತನಿಖೆ ನಡೆಸಿ ಅದರಲ್ಲಿ ಶಾಮೀಲಾದ ಅಧಿಕಾರಿಗಳು, ಸುಂದ್ರಮ್ಮ ಟ್ರೇಡಿಂಗ್ ಕಂಪೆನಿ ಹಾಗೂ ಶಾಸಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೀಪಕ್ ಪಾಟೀಲ ಚಾಂದೋರಿ ಅವರು 10–11–2025 ರಂದು ಲೋಕಾಯುಕ್ತ ಎ.ಡಿ.ಜಿ.ಪಿ. ಹಾಗೂ ಬೀದರ್ ಡಿವೈಎಸ್‌ಪಿಗೆ ದೂರು ಸಲ್ಲಿಸಿದ್ದರು.

ದೂರಿನ ಕುರಿತು ಲೋಕಾಯುಕ್ತ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದ ಕಾರಣ ದೀಪಕ್ ಪಾಟೀಲ ಚಾಂದೋರಿ ಅವರು 2026 ಫೆಬ್ರುವರಿ 2ರಂದು ಕಲಬುರ್ಗಿ ಹೈಕೋರ್ಟ್ ಪೀಠದ ಮೊರೆ ಹೋಗಿದ್ದರು.

ಆದೇಶದಿಂದ ಸಮಾಧಾನ: ಕಲಬುರಗಿ ಹೈಕೋರ್ಟ್ ಪೀಠದ ಆದೇಶದಿಂದ ಸಮಾಧಾನವಾಗಿದೆ. ನ್ಯಾಯಾಂಗ ವ್ಯವಸ್ಥೆಯ ಮೇಲೆ ಗೌರವ ಮತ್ತಷ್ಟು ಹೆಚ್ಚಾಗಿದೆ. ಪ್ರಕರಣದಲ್ಲಿ ಸತ್ಯಕ್ಕೆ ಜಯ ಸಿಗಲಿದೆ ಎಂದು ದೀಪಕ್ ಪಾಟೀಲ್ ಚಾಂದೋರಿ ಅವರು ಪ್ರತಿಕ್ರಿಯಿಸಿದ್ದಾರೆ.

ಶಾಸಕರು ಅಂಗನವಾಡಿ ಆಹಾರ ಪೂರೈಕೆಯಲ್ಲಿ ಲಂಚ ಪಡೆದಿರುವ ಬಗ್ಗೆ ತಾವು ಮಾಡಿರುವ ಆರೋಪ ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಸುಂದ್ರಮ್ಮ ಟ್ರೇಡಿಂಗ್ ಕಂಪನಿ ತನ್ನ ಖಾತೆಯಿಂದ ಶಾಸಕರ ಮಾಲೀಕತ್ವದ ಮುಂಬೈನ ಪ್ರಭು ಎಂಟರ್‌ಪ್ರೈಸೆಸ್ ಖಾತೆಗೆ ರೂ. 1 ಕೋಟಿ ಲಂಚದ ಹಣ ಜಮಾ ಮಾಡಿದೆ. ಖಾತೆ ಪರಿಶೀಲಿಸಿದರೆ ಭ್ರಷ್ಟಾಚಾರ ಬಯಲಾಗಲಿದೆ ಎಂದು ಹೇಳಿದ್ದಾರೆ.

ಮೊದಲು ಅಂಗನವಾಡಿ ಆಹಾರ



ಪೂರೈಕೆ ಗುತ್ತಿಗೆಗೆ ಟೆಂಡರ್ ಇರಲಿಲ್ಲ. ಶಾಸಕರು ಶಿಫಾರಸು ಮಾಡಿದವರಿಗೆ ಸರಬರಾಜು ಆದೇಶ ಕೊಡಲಾಗುತ್ತಿತ್ತು. ಶಾಸಕರು 2018ರಿಂದ 2023 ರ ವರೆಗೆ ಹಾಗೆಯೇ ತಮ್ಮ ಆಪ್ತರ ಸುಂದ್ರಮ್ಮ ಟ್ರೇಡಿಂಗ್ ಕಂಪನಿಗೆ ಸರಬರಾಜು ಆದೇಶ ಕೊಡಿಸಿದ್ದರು. ಅದಕ್ಕೆ ಪ್ರತಿಯಾಗಿ ಪ್ರತಿ ತಿಂಗಳು ಕಂಪೆನಿಗೆ ಹಣ ನಿಗದಿಪಡಿಸಿ, ನಗದು ರೂಪದಲ್ಲಿ ಪಡೆದಿದ್ದರು. ಅನಂತರ ಖಾತೆಗೆ ಹಣ ವರ್ಗಾವಣೆ ಮಾಡಿಸಿಕೊಂಡಿದ್ದರು ಎಂದು ಆರೋಪಿಸಿದ್ದಾರೆ.

ಸುಂದ್ರಮ್ಮ ಟ್ರೇಡಿಂಗ್ ಕಂಪೆನಿ ವಾರ್ಷಿಕ ರೂ. 6 ಕೋಟಿ ಮೌಲ್ಯದ ಪೌಷ್ಟಿಕ ಆಹಾರ ಪೂರೈಸುತ್ತಿದೆ. ಕಂಪನಿ ಹಾಗೂ ಶಾಸಕರ ಮಧ್ಯದ ಒಪ್ಪಂದ ಹಾಗೂ ಭ್ರಷ್ಟಾಚಾರದಿಂದಾಗಿ ಔರಾದ್ ಕ್ಷೇತ್ರದ ಅಂಗನವಾಡಿ ಮಕ್ಕಳಿಗೆ ಕಳಪೆ ಮಟ್ಟದ ಆಹಾರ ದೊರೆಯುತ್ತಿದೆ. ಮುಗ್ಧ ಮಕ್ಕಳ ಆಹಾರದಲ್ಲೂ ಭ್ರಷ್ಟಾಚಾರ ಎಸಗಿರುವವರಿಗೆ ಮಕ್ಕಳ ಶಾಪ ತಟ್ಟಲಿದೆ. ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಆಗುವವರೆಗೂ ತಮ್ಮ ಹೋರಾಟ ಮುಂದುವರಿಯಲಿದೆ ಎಂದು ಅವರು ತಿಳಿಸಿದ್ದಾರೆ.

Editor,Publisher,Printer & Owned by -Sharanabasappa K.H Published at plot No.38 Swvarget Nagar sagar city, near vaishnudevi temple, Aland Humanabad Ring Road, Kalaburagi -585101
Printed at : Sri Mallikarjun Graphics & offset printing , plot No.38 Swvarget Nagar sagar city, near vaishnudevi temple, Aland Humanabad Ring Road, Kalaburagi --585101(Karnataka)

